# ಮನುವಿಕಾಸ ವಾರ್ತಾಪತ್ರ

ಸಂಪಾದಕರು : ಶ್ರೀ ಗಣಪತಿ ಭಟ್ಟ

EdelGive Foundation
An Edelweiss Initiative

ಸಂಪುಟ - 1 ಸಂಚಿಕೆ - 1

ಏಪ್ರಿಲ್ ನಿಂದ ಜೂನ್ 2018

ಖಾಸಗಿ ಪ್ರಸಾರಕ್ಕಾಗಿ ಮಾತ್ರ


ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ತ್ರೈಮಾಸಿಕ ವಾರ್ತಾ ಪತ್ರ


## ಉತ್ತರ ಕನ್ನಡ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣ: ಮನುವಿಕಾಸ ಸಂಸ್ಥೆಯಿಂದ ಈಡಲ್ ಗೀವ್ ಸಂಸ್ಥೆಯೊಂದಿಗೆ ಒಪ್ಪಂದ

ಮನುವಿಕಾಸ ಸಂಸ್ಥೆ ಈಡಲ್ ಗೀವ್ ಫೌಂಡೇಶನ್ ಸಹಕಾರದಿಂದ 5000 ಮಹಿಳೆಯರನ್ನು ಉದ್ಯಮಶೀಲ ವ್ಯಕ್ತಿಗಳನ್ನಾಗಿ ಪರಿವರ್ತಿಸಲು ಯೋಜನೆಯನ್ನು ರೂಪಿಸಿದೆ. ಉತ್ತರ ಕನ್ನಡ ಜಿಲ್ಲೆಯ ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡಿ, ಆಯ್ದ ಗುಂಪುಗಳಿಗೆ ಕೌಶಲ್ಯ ತರಬೇತಿ ನೀಡಲಾಗುತ್ತದೆ. ದೇಶಪಾಂಡೆ ಪ್ರತಿಷ್ಠಾನದ ಸಹಕಾರದಿಂದ ಈಗಾಗಲೇ ಪ್ರಾರಂಭವಾಗಿರುವ ಪ್ರಗತಿ ಮಿತ್ರ ಸೌಹಾರ್ದ ಸಹಕಾರಿಯ ಮೂಲಕ ಆಯ್ದ ಉದ್ಯಮಶೀಲ ವ್ಯಕ್ತಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸ್ವ ಸಹಾಯ ಸಂಘ ಮತ್ತು ಜಂಟಿ ಬಾಧ್ಯತಾ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಒದಗಿಸಲಾಗುತ್ತದೆ. ಈಗಾಗಲೇ ಸಣ್ಣ ಪ್ರಮಾಣದ ಉದ್ಯೋಗದಲ್ಲಿ ತೊಡಗಿರುವ ಮಹಿಳೆಯರಿಗೆ ಉದ್ಯಮಶೀಲತೆ ತರಬೇತಿ ನೀಡಿ ಅವರ ಜೀವನ ಮಟ್ಟ ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತದೆ. ಮನುವಿಕಾಸ ಸಂಸ್ಥೆ ಪ್ರತೀ ಹೋಬಳಿಯಲ್ಲಿ ಅಥವಾ ತಾಲೂಕು ಮಟ್ಟದಲ್ಲಿ ಸಿಬ್ಬಂದಿಗಳನ್ನು ನೇಮಿಸಲು ನಿರ್ಧರಿಸಿದೆ. ಈ ಯೋಜನೆಗೆ ಬೆಂಗಳೂರಿನಲ್ಲಿ ಕಛೇರಿ ಹೊಂದಿರುವ S3IDF ಮತ್ತು ಹುಬ್ಬಳ್ಳಿಯ ದೇಶಪಾಂಡೆ ಪ್ರತಿಷ್ಠಾನ ಕೂಡ ಬೆಂಬಲ ನೀಡುತ್ತಿವೆ. ಹೊಲಿಗೆಯಿಂದಲೇ ಜೀವನ ನಡೆಸುವ ಮಹಿಳೆಯರು, ಮೀನುಗಾರ ಮಹಿಳೆಯರು ಮತ್ತು ಕಸ ಹೆಕ್ಕುವ ಕಾಯಕದಲ್ಲಿ ತೊಡಗಿರುವ ಮಹಿಳೆಯರಿಗೆ ಈ ಯೋಜನೆ ವಿಶೇಷ ಆಸರೆಯಾಗಲಿದೆ.



ಮನುವಿಕಾಸ ಸಹಕಾರದಿಂದ ಉದ್ಯೋಗ ನಿರತ ಮಹಿಳೆಯರು



ಮನುವಿಕಾಸ ಸಂಸ್ಥೆಯು ಈಗಾಗಲೇ 1250 ಸ್ವ-ಸಹಾಯ ಸಂಘಗಳನ್ನು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ರಚನೆ ಮಾಡಿದ್ದು 1500 ಜಂಟಿ ಬಾಧ್ಯತಾ ಗುಂಪುಗಳನ್ನು ರಚಿಸಿದೆ. ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಂದ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸಲಾಗಿದೆ. ಸಂಸ್ಥೆಯು ನಬಾರ್ಡ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್, ಐಸಿಐಸಿಆಯ್ ಮತ್ತು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕುಗಳೊಂದಿಗೆ ಒಪ್ಪಂದ ಮಾಡಿಕೊಂಡು ಸ್ವ-ಸಹಾಯ ಸಂಘಗಳಿಗೆ ಸಾಲಸೌಲಭ್ಯ ಒದಗಿಸುತ್ತಿದೆ.

ಸುಮಾರು 25000ಕ್ಕೂ ಹೆಚ್ಚು ಮಹಿಳೆಯರು ಸ್ವ-ಸಹಾಯ ತತ್ವದಡಿಯಲ್ಲಿ ಒಗ್ಗೂಡಿ ವಿವಿಧ ರೀತಿಯ ಆದಾಯ ತರುವ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಈ ರೀತಿ ಆದಾಯ ತರುವ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳೆಯರನ್ನು ಒಂದುಗೂಡಿಸಿ ಉತ್ಪಾದಕ ಕಂಪನಿಗಳ ತತ್ವದಡಿಯಲ್ಲಿ ಒಂದುಗೂಡಿಸಲು ಮನುವಿಕಾಸ ಸಂಸ್ಥೆ ಈಡಲ್ ಗೀವ್ ಸಂಸ್ಥೆಯ ಸಹಕಾರದಿಂದ ಶ್ರಮಿಸುತ್ತಿದೆ. ಸ್ವ-ಸಹಾಯ ಸಂಘದ ಮಹಿಳೆಯರನ್ನು ಒಂದುಗೂಡಿಸಿ ಒಕ್ಕೂಟ ರಚನೆ ಮಾಡಲು ದೇಶಪಾಂಡೆ ಪ್ರತಿಷ್ಠಾನ ಹುಬ್ಬಳ್ಳಿ ಇವರು ಸಹಕಾರ ನೀಡುತ್ತಿದ್ದಾರೆ.

## ಸಂಪಾದಕೀಯ,



ಗಣಪತಿ ಭಟ್ಟ

ಮನುವಿಕಾಸ ತ್ರೈಮಾಸಿಕ ಸುದ್ದಿಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬಿಡುಗಡೆಗೊಳಿಸಲು ಅತೀವ ಸಂತೋಷವಾಗುತ್ತಿದೆ. ಸಂಸ್ಥೆಯನ್ನು 2003ನೇ ಇಸ್ವಿಯಲ್ಲಿ ಪ್ರಾರಂಭಿಸುವಾಗ ಸಂಸ್ಥೆ ಈ ಮಟ್ಟಕ್ಕೆ ಬೆಳೆದು ನಿಲ್ಲಬಹುದು ಎನ್ನುವ ಕನಸು ಕೂಡ ಇರಲಿಲ್ಲ. ಕೇವಲ 13 ಸಾವಿರ ವಾರ್ಷಿಕ ವೆಚ್ಚದೊಂದಿಗೆ ಪ್ರಾರಂಭಿಸಿದ ಮನುವಿಕಾಸ ಸಂಸ್ಥೆ ಈಗ ತನ್ನ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಾರ್ಷಿಕ 2 ಕೋಟಿ ವೆಚ್ಚಮಾಡುವ ಹಂತಕ್ಕೆ ಬಂದು ನಿಂತಿದೆ. ಸಂಸ್ಥೆಯನ್ನು ಸಿದ್ದಾಪುರ ತಾಲೂಕಿನ ಕರ್ಜಗಿಯಲ್ಲಿ ಪ್ರಾರಂಭಿಸಿದಾಗ ಯಾರೂ ದೇಣಿಗೆ ಕೊಡುವವರೂ ಇರಲಿಲ್ಲ, ದೇಣಿಗೆ ಸಂಗ್ರಹಿಸುವ ವಿಧಾನವೂ ತಿಳಿದಿರಲಿಲ್ಲ. ಸಂಸ್ಥಾಪಕ ಸದಸ್ಯರೂ ಮತ್ತು ಹಿರಿಯರೂ ಆದ ಶ್ರೀ ಹರಿಶ್ಚಂದ್ರ ಭಟ್ಟರ ಸಲಹೆ ಮತ್ತು ಸಹಕಾರ, ಸ್ನೇಹಿತರಾದ ನಾಗರಾಜ ಹೆಗಡೆ, ಕೇಶವಮೂರ್ತಿ ಮತ್ತಿತರರು ವಿವಿಧ ತರಬೇತಿ ಮತ್ತು ಕಾರ್ಯಕ್ರಮಗಳ ಆಯೋಜನೆಗೆ ನೆರವು ನೀಡಿರುವುದು ಸಂಸ್ಥೆಯನ್ನು ಜೀವಂತವಾಗಿಡಲು ಸಹಕಾರಿಯಾಯಿತು.

ಹಾವೇರಿಯಲ್ಲಿ ಟಿ.ಆರ್.ಡಿ.ಸಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಡಾ. ಅನಿಲ್ ಅಬ್ಬಿಯವರು "ಮನುವಿಕಾಸ" ಹೆಸರನ್ನು ಸೂಚಿಸಿ ಸಂಸ್ಥೆ ಮಾಡುವಂತೆ ಪ್ರೇರೇಪಿಸಿದರು. ಅದಕ್ಕೆ ಶ್ರೀ ಎಸ್. ಎಚ್ ಮಜೀದ್, ಶ್ರೀಮತಿ ಗೀತಾ ಪಾಟೀಲ ಮತ್ತು ಶ್ರೀಮತಿ ಪ್ರಮೀಳಾ ಪೈ ಸಹಕರಿಸಿದರು.

ಸಂಸ್ಥೆಯನ್ನು ಸ್ನೇಹಿತರ ಸಹಕಾರದೊಂದಿಗೆ ಪ್ರಾರಂಭಿಸಿದರೂ ಸಂಸ್ಥೆಯ ಕೆಲಸಕಾರ್ಯಗಳನ್ನು ತಂದೆಯವರಾದ ಶ್ರೀ ಹರಿಶ್ಚಂದ್ರ ಭಟ್ಟ ಅವರೇ ನೆರವೇರಿಸುತ್ತ ಬಂದರು. ಟಿ. ಆರ್. ಡಿ. ಸಿ ಸಂಸ್ಥೆ ಮತ್ತು ದೇಶಪಾಂಡೆ ರುಡ್ಸೆಟಿಗಳಲ್ಲಿ ಕೆಲಸ ಮಾಡಿದ ಅನುಭವ ಸಂಸ್ಥೆಯನ್ನು ಕರ್ಜಗಿ ಗ್ರಾಮದಿಂದ ಸಿದ್ದಾಪುರ ತಾಲೂಕಿನಾದ್ಯಂತ ಕಾರ್ಯಚಟುವಟಿಕೆಯನ್ನು ವಿಸ್ತರಿಸಲು ಪ್ರೇರೇಪಿಸಿತು. ಹಿರಿಯರಾದ ಶ್ರೀ ಪಿ. ಆರ್ ಭಟ್ಟ ಮತ್ತು ಪ್ರೋ. ಕೆಂಪರಾಜು ಅವರು ಆಗಾಗ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ.

ಪ್ರಪ್ರಥಮವಾಗಿ ಗೀವ್ ಇಂಡಿಯಾ ಸಂಸ್ಥೆಯು ಮನುವಿಕಾಸದ ಕೆಲವು ಕಾರ್ಯಕ್ರಮಗಳನ್ನು ಮುನ್ನಡೆಸಲು ಸಹಕಾರ ನೀಡಿತು. ಬಡ ಮತ್ತು ನಿರ್ಗತಿಕ ಮಕ್ಕಳಿಗೆ ನಿತ್ಯೋಪಯೋಗಿ ವಸ್ತುಗಳು ಮತ್ತು ಕಲಿಕೋಪಕರಣ ವಿತರಣೆ ನಡೆಸಲು ಮತ್ತು ಸಣ್ಣ ಕೆರೆಗಳನ್ನು ನಿರ್ಮಿಸಲು ಆರ್ಥಿಕ ಸಹಕಾರ ನೀಡಿತು. ನಂತರ 2013 ರಿಂದ ದೇಶಪಾಂಡೆ ಪ್ರತಿಷ್ಠಾನ ಮನುವಿಕಾಸ ಸಂಸ್ಥೆಗೆ ನಿಜವಾದ ಸಾಂಸ್ಥಿಕ ರೂಪ ಕೊಡುವಲ್ಲಿ ಸಹಕರಿಸಿತು. ಯಾವುದೇ ಸಂಸ್ಥೆ ಕೇವಲ ಉಚಿತವಾಗಿ ಜನರಿಗೆ ಸೇವೆ ಸಲ್ಲಿಸಿದಲ್ಲಿ ಸಂಸ್ಥೆಯ ಚಟುವಟಿಕೆಯನ್ನು ವಿಸ್ತರಿಸಲು ಮತ್ತು ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸಲು ಸಾಧ್ಯವಿಲ್ಲ. ಸೇವೆಗೆ ಕನಿಷ್ಠ ವೆಚ್ಚವನ್ನಾದರೂ ಫಲಾನುಭವಿಗಳು ನೀಡಿದಲ್ಲಿ ಕಾರ್ಯಕ್ರಮದ ಫಲ ಸರಿಯಾಗಿ ಜನರಿಗೆ ತಲುಪುತ್ತದೆ ಎನ್ನುವ ವಿಷಯ ಮನದಟ್ಟಾಗಲು ಪ್ರಾರಂಭವಾಯಿತು.

ಮನುವಿಕಾಸ ಪ್ರಸ್ತುತ ಯಾವುದೇ ಕಾರ್ಯಕ್ರಮಗಳನ್ನು ಯೋಜಿಸುವಾಗ ಫಲಾನುಭವಿಗಳ ವಂತಿಗೆಯನ್ನೇ ಹೆಚ್ಚು ಬಯಸುತ್ತದೆ. ಪ್ರಾರಂಭದಲ್ಲಿ ವರ್ಷಕ್ಕೆ 08 ರಿಂದ 10 ಕೃಷಿ ಹೊಂಡ ಅಥವಾ ಸಣ್ಣಕೆರೆ ನಿರ್ಮಿಸುತ್ತಿದ್ದ ಸಂಸ್ಥೆ ಈಗ ವರ್ಷಕ್ಕೆ 600 ಕೆರೆಗಳನ್ನು ನಿರ್ಮಿಸಲು ಶಕ್ತವಾಗಿದೆ. ಸಂಸ್ಥೆ ಈಗ ಉತ್ತರ ಕನ್ನಡ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಹೆಚ್ಚು ಕಾರ್ಯವ್ಯಾಪ್ತಿ ಹೊಂದಿದೆ. ಮಹಿಳಾ ಸಬಲೀಕರಣ, ಬಡ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ, ಬೆಟ್ಟ ಭೂಮಿಯ ಅಭಿವೃದ್ಧಿ, ಕೆರೆ ಮತ್ತು ಕೃಷಿ ಹೊಂಡಗಳ ನಿರ್ಮಾಣ, ಆರ್ಥಿಕ ಸೇರ್ಪಡೆ ಮೊದಲಾದ ಕ್ಷೇತ್ರಗಳಲ್ಲಿ ಸಂಸ್ಥೆ ಕೆಲಸ ನಿರ್ವಹಿಸುತ್ತಿದೆ.

ಮನುವಿಕಾಸ ತಾನೊಂದು ಎನ್. ಜಿ. ಓ ಆದರೂ ಸೋಶಿಯಲ್ ಎಂಟರ್‌ಪ್ರೈಸ್ ಆಗಿ ತಿರುವು ಪಡೆದಿದೆ. ಮನುವಿಕಾಸ ವಾರ್ತಾಪತ್ರ ಓದುಗರಿಗೆ ಮನುವಿಕಾಸ ಸಂಸ್ಥೆಯ ವಿವಿಧ ಕಾರ್ಯಕ್ರಮಗಳ ಪರಿಚಯ ಮಾಡಿಕೊಡುವ ಉದ್ದೇಶದೊಂದಿಗೆ ವಿವಿಧ ಸರ್ಕಾರದ ಯೋಜನೆಗಳು, ವಿವಿಧ ಅಭಿವೃದ್ಧಿಪರ ವಿಚಾರಗಳು, ವಿವಿಧ ಸಂಘಸಂಸ್ಥೆಗಳ ಸಾಧನೆಗಳು, ಸಾಧಕರ ಯಶೋಗಾಥೆಗಳು ಮತ್ತು ವಿವಿಧ ಅವಿಷ್ಕಾರಗಳ ಮೇಲೆ ಬೆಳಕು ಚೆಲ್ಲುವ ವಿಚಾರ ಹೊಂದಿದೆ. ಓದುಗರಿಗೆ ಸುದ್ದಿಪತ್ರಿಕೆ ಇನ್ನಷ್ಟು ಹತ್ತಿರವಾಗಲು ಮುಕ್ತ ಮನಸ್ಸಿನಿಂದ ಸಲಹೆಗಳನ್ನು ಸ್ವೀಕರಿಸಲಾಗುತ್ತದೆ.

# ಮನುವಿಕಾಸ ಸಂಸ್ಥೆಯಿಂದ ಮರುಜೀವ ಪಡೆಯುತ್ತಿರುವ ಕೆರೆಗಳು

## ಬನವಾಸಿ ಭಾಗದಲ್ಲಿ ಕೆರೆಗಳ ಪುನರುಜ್ಜೀವನ

ಮನುವಿಕಾಸ ಸಂಸ್ಥೆಯಿಂದ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಣ್ಣ ಕೆರೆಗಳನ್ನು ನಿರ್ಮಿಸುವಾಗ ಯಾಕೋ ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್ ವೆಬ್‌ಸೈಟ್ ನೋಡಿದಾಗ ಒಂದು ಕ್ಷಣ ಆತಂಕವಾಯಿತು, ಹೆಚ್ಚು ಮಳೆ ಬೀಳುವ ಪ್ರದೇಶವಾದ ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಭಾಗ ಮತ್ತು ಪಕ್ಕದ ಸೊರಬ ತಾಲೂಕಿನ ಕೆಲವು ಪ್ರದೇಶ ಅಂತರ್ಜಲದ ದೃಷ್ಟಿಯಲ್ಲಿ ಕ್ರಿಟಿಕಲಿ ಎಕ್ಸ್‌ಪ್ಲಾಯಟೆಡ್ ಪ್ರದೇಶ ಎನ್ನುವುದು ತಿಳಿಯಿತು. ವರದಾ ನದಿಯ ಇಕ್ಕೆಲಗಳಲ್ಲಿ ಸಾಕಷ್ಟು ಕೆರೆಗಳು ಕದಂಬರಾಜರ ಕಾಲದಲ್ಲಿಯೇ ನಿರ್ಮಾಣವಾಗಿವೆ. ಸುಮಾರು 20 ಕ್ಕಿಂತ ಹೆಚ್ಚು ಸಣ್ಣ ನೀರಾವರಿ ಇಲಾಖೆಯ ದೊಡ್ಡ ದೊಡ್ಡ ಕೆರೆಗಳಿವೆ. ಆದರೆ ಹೆಚ್ಚಿನ ಎಲ್ಲ ಕೆರೆಗಳು ಹೂಳು ತುಂಬಿದ್ದು ನೀರಿನ ಸಂಗ್ರಹಣ ಸಾಮರ್ಥ್ಯ ತುಂಬಾ ಕಡಿಮೆಯಾಗಿದೆ. ಇಂತಹ ಕೆರೆಗಳಲ್ಲಿ ಗುಡ್ನಾಪುರದ 164 ಎಕರೆ ಪ್ರದೇಶದ ಬಂಗಾರೇಶ್ವರ ಕೆರೆಯೂ ಒಂದು.

ಒಂದು ಸ್ವಯಂ ಸೇವಾ ಸಂಸ್ಥೆಯಾಗಿ ಮನುವಿಕಾಸ ಈ ಕೆರೆಗಳ ಹೂಳೆತ್ತಿ ಪುನರುಜ್ಜೀವನ ಮಾಡುವ ಯೋಜನೆಯನ್ನು ಜನವರಿ 2017 ರಲ್ಲಿ ತಯಾರಿಸಿತು. ಸ್ಥಳೀಯ ರೈತರಲ್ಲಿ ಈ ಕುರಿತು ಚರ್ಚಿಸಲು ಪ್ರಾರಂಭಿಸಿದಾಗ ಒಂದು ಸರ್ಕಾರೇತರ ಸಂಸ್ಥೆ ಈ ಕೆರೆಗಳ ಹೂಳೆತ್ತಲು ಸಾಧ್ಯವೇ ಎನ್ನುವ ಸಂದೇಹದೊಂದಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಎಷ್ಟೋ ರೈತರು ಸರ್ಕಾರದಿಂದ ಸಾಧ್ಯವಾಗದ ಕೆಲಸ ಒಂದು ಸಂಸ್ಥೆಯಾಗಿ ನಿಮ್ಮಿಂದ ಸಾಧ್ಯವೇ ಎಂದು ಪ್ರಶ್ನಿಸಿದ್ದರು. ಇನ್ನು ಕೆಲವರು ಕೆರೆಗಳಿಗೆ ಎಷ್ಟು ಹಣ ಮಂಜೂರಿಯಾಗಿದೆ ಎಂದೂ ಕೇಳಿದ್ದರು. ಆ ಸಮಯದಲ್ಲಿ ಸಂಸ್ಥೆ ಇನ್ನೂ ಯೋಜನೆಯ ತಯಾರಿಯ ಹಂತದಲ್ಲಿಯೇ ಇತ್ತು.  ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಹರಿಶ್ಚಂದ್ರ ಭಟ್ಟರು ಇನ್ನೂ ಹಣ ಮಂಜೂರಿಯಾಗಿಲ್ಲ. ಯೋಜನೆ ತಯಾರಿಸುತ್ತಿದ್ದೇವೆ. ನೀವು ಕೆರೆಯ ಮಣ್ಣನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ಸಾಗಿಸುವುದಾದರೆ ನಾವು ಬೇರೆ ಬೇರೆ ಮೂಲಗಳಿಂದ ಹಣ ಸಂಗ್ರಹಿಸಿ ಕೆರೆ ಹೂಳೆತ್ತಲು ಸಹಕಾರ ನೀಡುವುದಾಗಿ ತಿಳಿಸಿದರು. ಅದಕ್ಕೆ ಕೆಲವರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಮಧುರವಳ್ಳಿ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಅಶೋಕ ನಾಯ್ಕ, ಕಂತ್ರಾಜಿಯ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಶಂಕರ ಗೌಡ್ರು, ಹೊಸೂರಿನ ಶ್ರೀ ಚಂದ್ರಣ್ಣನವರು ಈ ಯೋಜನೆ ಅನುಷ್ಠಾನಗೊಳಿಸಲು ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು. ನಂತರ ಗುಡ್ನಾಪುರ ಗ್ರಾಮ ಪಂಚಾಯತಿ ಅಧ್ಯಕ್ಷರು ತಮ್ಮ ಪಂಚಾಯತಿ ವ್ಯಾಪ್ತಿಯ ಎಲ್ಲ ಕೆರೆಗಳ ಹೂಳೆತ್ತಿ ಎಂದು ಆಗ್ರಹಿಸಿದರು. ಯೋಜನೆ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯಲು ತೆರಳಿದಾಗ ಗುಡ್ನಾಪುರ, ಬನವಾಸಿ, ಭಾಶಿ, ಗುಡವಿ ಪಂಚಾಯತದ ಅಧ್ಯಕ್ಷರು ಮತ್ತು ಅಧಿಕಾರಿಗಳು ಚರ್ಚಿಸಿ ಸಂತೋಷದಿಂದ ಅನುಮತಿ ಪತ್ರ ನೀಡಿದರು.

ನಂತರ ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ಟರ ಮಾರ್ಗದರ್ಶನದಲ್ಲಿ ಯೋಜನೆ ತಯಾರಿ ಕಾರ್ಯ ಹಗಲಿರುಳು ನಡೆಯಿತು. ಇಂಜಿನಿಯರುಗಳಾದ ಶ್ರೀ ಸುನಿಲ್ ಆಚಾರ್ಯ, ಶ್ರೀ ಸಂದೀಪ ಮತ್ತು ಮಂಜುನಾಥರವರು ಎಸ್ಟಿಮೇಟ್ ತಯಾರಿಯಲ್ಲಿ ಉತ್ತಮ ಸಹಕಾರ ನೀಡಿದರು. ಸಿಬ್ಬಂದಿಗಳಾದ ಶ್ರೀ ಶ್ರೀಧರ ಗೌಡ, ಶ್ರೀ ಮಹಾಬಲೇಶ್ವರ ಗೌಡ, ಶ್ರೀ ರಾಘವೇಂದ್ರ ಭಟ್ಟ, ಶ್ರೀ ಅಶ್ವತ್ಥ ನಾಯ್ಕ, ಶ್ರೀ ಡಿ.ಜಿ. ಭಟ್ಟ ಮತ್ತಿತರರು ಸಾಮಾಜಿಕ ಸಂಘಟನೆ ಮತ್ತು ವಿವಿಧ ಅನುಮತಿ ಪತ್ರ ಪಡೆಯುವಲ್ಲಿ ಶ್ರಮಿಸಿದರು.

ಸಣ್ಣ ನೀರಾವರಿ ಇಲಾಖೆಯಿಂದ ಅನುಮತಿ ದೊರೆಯಲು ಸುಮಾರು 8 ತಿಂಗಳ ಕಾಲ ಹಿಡಿದಿದ್ದು ಅನೇಕ ಬಾರಿ ಅನುಸರಣೆ ಮಾಡಲಾಗಿದೆ. ಶಿರಸಿಯ ಸಣ್ಣ ನೀರಾವರಿ ಇಲಾಖೆಯ ಅಭಿಯಂತರುಗಳಾದ ಶ್ರೀ ಧಾಕು ಗೌಡ ಮತ್ತು ಶ್ರೀ ವಿನೋದ ನಾಯ್ಕರವರು ಅನುಮತಿ ದೊರಕಿಸಿಕೊಡಲು ಪೂರಕ ದಾಖಲೆ ಒದಗಿಸಿ ಸಹಕಾರ ನೀಡಿದ್ದಾರೆ.

ನಂತರ ಈ ಭಾಗದ 13 ಕೆರೆಗಳನ್ನು ಆಯ್ಕೆ ಮಾಡಿ ಪ್ರಸ್ತಾವನೆ ತಯಾರಿಸಿ ವಿವಿಧ ಕಂಪನಿಗಳಿಗೆ ಹಣಕಾಸಿನ ನೆರವನ್ನು ಒದಗಿಸಲು ಕೇಳಿಕೊಳ್ಳಲಾಯಿತು. ಅದರಲ್ಲಿ ಕೋಕಾ ಕೋಲಾ ಇಂಡಿಯಾ ಫೌಂಡೇಶನ್‌ರವರು ತಮ್ಮ ಉತ್ಸಾಹ ತೋರಿ ಸ್ಥಳ ಭೇಟಿ ನೀಡಿ 10 ಕೆರೆಗಳ ಅಭಿವೃದ್ಧಿಗೆ ಆರ್ಥಿಕ ಸಹಕಾರ ನೀಡಿದರು. ಸುಮಾರು 1.30 ಕೋಟಿ ಹಣಕಾಸಿನ ನೆರವು ನೀಡಲು ಒಪ್ಪಿ ಒಂದು ಕಂತಿನ ಹಣಕ್ಕೆ ತಕ್ಷಣ ಮಂಜೂರಿ ನೀಡಿದರು. ಪ್ರಪ್ರಥಮವಾಗಿ 2 ಕೆರೆಗಳ ಹೂಳೆತ್ತುವ ಕಾರ್ಯಕ್ರಮ 02 ಜನವರಿ, 2018 ರಂದು ಹಾಡಲಗಿ- ಮಧುರವಳ್ಳಿ ಗ್ರಾಮದಲ್ಲಿ ಶಾಸಕ ಶ್ರೀ ಶಿವರಾಮ ಹೆಬ್ಬಾರರವರಿಂದ ಉದ್ಘಾಟನೆಯೊಂದಿಗೆ

ಸ್ಥಳೀಯ ಸಾರ್ವಜನಿಕರು, ಯುವಕ ಸಂಘದವರು, ಗ್ರಾಮ ಪಂಚಾಯತಿ ಸದಸ್ಯರು, ಜಿಲ್ಲಾ ಪಂಚಾಯತಿ ಸದಸ್ಯರು, ತಾಲೂಕಾ ಪಂಚಾಯತಿ ಸದಸ್ಯರು ಮತ್ತು ಅಧ್ಯಕ್ಷರು ಉತ್ತಮ ಸಹಕಾರ ನೀಡಿದರು.

ಶಿರಸಿ ರೋಟರಿ ಕ್ಲಬ್‌ನ ಅಧ್ಯಕ್ಷರು ಮತ್ತು ಸದಸ್ಯರು ಕಾರ್ಯಕ್ರಮಗಳಿಗೆ ಆಗಮಿಸಿ, ಭಾಗವಹಿಸಿ, ಬೆನ್ನು ತಟ್ಟಿ ಪ್ರೋತ್ಸಾಹಿಸಿ ಯೋಜನೆಯ ಯಶಸ್ಸಿಗೆ ಕಾರಣರಾಗಿದ್ದಾರೆ.

ಮನುವಿಕಾಸ ಸಂಸ್ಥೆಯು ಬನವಾಸಿ ಹೋಬಳಿಯಲ್ಲಿ 10 ಕೆರೆಗಳ ಪುನರುಜ್ಜೀವನ ಕಾರ್ಯಕ್ರಮವನ್ನು ಕೋಕಾ ಕೋಲಾ ಇಂಡಿಯಾ ಫೌಂಡೇಶನ್ ಸಹಕಾರದಿಂದ ಹಮ್ಮಿಕೊಂಡಿದೆ. ಸುಮಾರು 2 ಕೋಟಿ ಅಂದಾಜು ಮೊತ್ತದ ಯೋಜನೆಯಲ್ಲಿ ಶೇ 50 ರಷ್ಟು ಪಾಲುದಾರಿಕೆಯನ್ನು ರೈತರು ನಿರ್ವಹಿಸಬೇಕಿದೆ. ರೈತರು ಹೂಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಹೊಲಗಳಿಗೆ ಸಾಗಿಸುವ ಮೂಲಕ ಸಂಪೂರ್ಣ ಸಹಕಾರ ನೀಡಿ ಈಗಾಗಲೇ 07 ಕೆರೆಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಲಾಗಿದೆ. ಶಿರಸಿ ತಾಲೂಕಿನ ಪೂರ್ವ ಭಾಗ ಸಂಪೂರ್ಣ ಬರಗಾಲ ಪೀಡಿತ ಪ್ರದೇಶವಾಗಿದ್ದು ವರದಾ ನದಿಯ ದಡದಲ್ಲಿರುವ ಹಳ್ಳಿಗಳು ನೀರಾವರಿಗಾಗಿ ಕೆರೆಗಳನ್ನೇ ಅವಲಂಭಿಸಿವೆ. ಬೇಸಿಗೆಯಲ್ಲಿ ವರದೆಯ ಹರಿವೂ ಕಡಿಮೆ ಆಗಿ ಎಲ್ಲಕಡೆ ನೀರಿನ ಬವಣೆ ಪ್ರಾರಂಭವಾಗುತ್ತದೆ.




ಕೆರೆ ಕಾಮಗಾರಿ ಉದ್ಘಾಟಿಸಿ ಮಾತನಾಡುತ್ತಿರುವ ಸ್ಥಳೀಯ ಶಾಸಕ ಶ್ರೀ ಶಿವರಾಮ ಹೆಬ್ಬಾರ




ಗುಡ್ನಾಪುರ ಕೆರೆ ಕಾಮಗಾರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿರುವ ಶ್ರೀ ಗಣಪತಿ ಭಟ್ಟ

ಕದಂಬರ ಕಾಲದಲ್ಲಿ ಅನೇಕ ಕೆರೆಗಳು ಈ ಭಾಗದಲ್ಲಿ ನಿರ್ಮಾಣವಾಗಿವೆ. ನಂತರದ ದಿನದಲ್ಲಿ ಸರ್ಕಾರ ಕೆಲವು ಕೆರೆಗಳ ಅಲ್ಪ ಪ್ರಮಾಣದಲ್ಲಿ ಹೂಳು ತೆಗೆದರೂ ಅದು ರೈತರಿಗೆ ಸಂಪೂರ್ಣ ಪ್ರಯೋಜನವಾಗಿಲ್ಲ. ಎಲ್ಲ ಕೆರೆಗಳು ಸಂಪೂರ್ಣ ಹೂಳಿನಿಂದ ಆವೃತವಾಗಿದ್ದು ನೀರಿನ ಸಂಗ್ರಹದ ಸಾಮರ್ಥ್ಯ ಕಡಿಮೆ ಆಗಿದೆ. ಮನುವಿಕಾಸದವರು ಕೆರೆಯ ಹೂಳನ್ನು ಸಂಪೂರ್ಣವಾಗಿ ಎತ್ತಿದ್ದು ಹೊಸ ಇತಿಹಾಸವನ್ನೇ ನಿರ್ಮಾಣ ಮಾಡಿದ್ದಾರೆ ಎಂದು ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಶಿವಶಂಕರ ಗೌಡ (ದೂ: 9740042100) ಕಂತ್ರಾಜಿ ಹೇಳುತ್ತಾರೆ. ಕೆರೆ ಕೆಲಸ ಪ್ರಾರಂಭವಾದಾಗಿನಿಂದ ಒಂದು ತಿಂಗಳಕಾಲ ಶ್ರೀ ಶಿವಶಂಕರ ಗೌಡರು ಕೆರೆ ಕೆಲಸದ ಮೇಲುಸ್ತುವಾರಿಯನ್ನು ಸ್ವಯಂ ಸೇವಕರಾಗಿ ನಿರ್ವಹಿಸಿದ್ದಾರೆ.

ಮನುವಿಕಾಸ ಸಂಸ್ಥೆಯು ಇತಿಹಾಸ ಪ್ರಸಿದ್ಧ ಕದಂಬರ ಕಾಲದಲ್ಲಿ ನಿರ್ಮಾಣವಾದ ಗುಡ್ನಾಪುರ ಶ್ರೀ ಬಂಗಾರೇಶ್ವರ ಕೆರೆಯನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದೆ. ಒಟ್ಟು 164 ಎಕರೆ ವಿಸ್ತೀರ್ಣದ ಈ ಕೆರೆಯನ್ನು ಒಂದು ಸರ್ಕಾರೇತರ ಸಂಸ್ಥೆ ಅಭಿವೃದ್ಧಿ ಪಡಿಸುತ್ತಿರುವುದು ದೇಶದಲ್ಲೇ ಮಾದರಿಯಾಗಿದೆ. ಈಗಾಗಲೇ ಕೆರೆಯ ಸುತ್ತಲೂ ಬದು ನಿರ್ಮಾಣವಾಗಿದೆ. ರೈತರು ತಮ್ಮ ಜಮೀನಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹೂಳನ್ನು ಸಾಗಿಸುವ ಮೂಲಕ ಕೆರೆ ಅಭಿವೃದ್ಧಿಗೆ ಅವಿರತ ಶ್ರಮಿಸುತ್ತಿದ್ದಾರೆ. ಕೆರೆಯ ಬದುವನ್ನು ಭದ್ರಗೊಳಿಸಿ ಸುತ್ತಲೂ ಜನರಿಗೆ ಸಂಚರಿಸಲು ಸಾಧ್ಯವಾಗುವ ರಸ್ತೆಯನ್ನು ಈಗಾಗಲೇ ಭಾಗಶಃ ನಿರ್ಮಿಸಲಾಗಿದೆ. ಈ ಕೆರೆ ಪ್ರವಾಸೋದ್ಯಮ ದೃಷ್ಟಿಯಿಂದಲೂ ಅತ್ಯಂತ ಪ್ರಸಿದ್ಧವಾಗಿದ್ದು ಕೆರೆಯ ದಂಡೆಯ ಮೇಲೆ ಬಂಗಾರೇಶ್ವರ ದೇವಾಲಯವಿದೆ. ಈ ಪವಿತ್ರ ಸ್ಥಳಕ್ಕೆ ದಿನಂಪ್ರತಿ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಕೆರೆ ಒತ್ತುವರಿಯನ್ನು ಸಣ್ಣ ನೀರಾವರಿ ಇಲಾಖೆಯವರ ಸಹಕಾರದಲ್ಲಿ ರೈತರು ಸ್ವಯಂ ಪ್ರೇರಣೆಯಿಂದ ಖುಲ್ಲಾಗೊಳಿಸಿದ್ದು ಸುತ್ತಲೂ ಬದು ನಿರ್ಮಾಣ ಮಾಡಿದ್ದರಿಂದ ಮುಂದೆ ಕೆರೆ ಒತ್ತುವರಿಗೆ ಅವಕಾಶವಿಲ್ಲದಂತಾಗಿದೆ. ಸ್ಥಳೀಯ ಗ್ರಾಮ ಪಂಚಾಯತ ಮತ್ತು ಗ್ರಾಮಸ್ಥರು ಹಗಲಿರುಳು ಕೆರೆಕಾಮಗಾರಿ ವೀಕ್ಷಣೆ ಮಾಡುತ್ತ ಕೆರೆ ಪುನರುಜ್ಜೀವನದ ಯಶಸ್ಸಿಗೆ ಹೋರಾಡುತ್ತಿದ್ದಾರೆ.



ಕಾಮಗಾರಿ ಪೂರ್ವ



ಕಾಮಗಾರಿ ನಡೆಯುತ್ತಿರುವುದು

ಅಭಿವೃದ್ಧಿ ಹಂತದಲ್ಲಿರುವ 164 ಎಕರೆ ಕ್ಷೇತ್ರದ ಗುಡ್ನಾಪುರ ಕೆರೆ

## ಮನುವಿಕಾಸ ಸಂಸ್ಥೆ ಬನವಾಸಿ ಹೋಬಳಿಯಲ್ಲಿ ಅಭಿವೃದ್ಧಿ ಪಡಿಸಲು ಆಯ್ಕೆ ಮಾಡಿದ ಕೆರೆಗಳ ವಿವರ.

| ಅ.ಸಂ. | ಹಳ್ಳಿ | ಕೆರೆ ಕ್ಷೇತ್ರ (ಎಕರೆಗಳಲ್ಲಿ) | ನೀರು ಶೇಖರಣೆ ಹೆಚ್ಚುವ ಅಂದಾಜು ಪ್ರಮಾಣ (ಮಿಲಿಯನ್ ಲೀಟರ್‌ಗಳಲ್ಲಿ) |
|---|---|---|---|
| 1 | ಹಾಡಲಗಿ ಹೊಸಕಟ್ಟಿ ಕೆರೆ | 6.03 | 12.6 |
| 2 | ಹಾಡಲಗಿ ಮಲ್ಲಾಣಿಕಟ್ಟಿ ಕೆರೆ | 5.17 | 17.55 |
| 3 | ಹಾಡಲಗಿ ಮದರವಳ್ಳಿ ಕೆರೆ | 40 | 14 |
| 4 | ಕಪಗೇರಿ ಕೆರೆ | 8.18 | 13.69 |
| 5 | ನರೂರ ಕೆರೆ | 15.13 | 29.63 |
| 6 | ಸೊರಬ ತಾಲೂಕಿನ ಹೊಸೂರ ಕೆರೆ | 15.03 | 23.47 |
| 7 | ತಿಗಣಿ -01 | 9.23 | 10.08 |
| 8 | ತಿಗಣಿ-02 | 7.05 | 21.6 |
| 9 | ಗುಡ್ನಾಪುರ ಬಂಗಾರೇಶ್ವರ ಕೆರೆ | 164.04 | 34 |
| 10 | ಕಂತ್ರಾಜಿ | 20.10 | 18.9 |

ಈ ಕೆರೆಗಳ ಹೂಳನ್ನು ತೆಗೆದು ರೈತರ ಹೊಲಗಳಿಗೆ ಸಾಗಿಸಲು ಅನುವುಮಾಡಿಕೊಡುವುದು, ಸುಂದರವಾದ ಮತ್ತು ಸಂಚಾರಯೋಗ್ಯ ಬದುವನ್ನು ನಿರ್ಮಿಸುವುದು, ಅಲ್ಲಲ್ಲಿ ನೀರು ಬರುವ ಜಾಗದಲ್ಲಿ ಪೈಪ್ ಅಳವಡಿಕೆ, ಹೊರಗಿನಿಂದ ಪುನಃ ಹೂಳು ಬರದಂತೆ ತಡೆಯಲು ಸಿಲ್ಟ್ ಟ್ರಾಪ್ ನಿರ್ಮಾಣ, ನೀರು ಇಂಗಲು ಸಹಕಾರಿಯಾಗುವಂತೆ ಇಂಗು ಗುಂಡಿ ನಿರ್ಮಾಣದ ಗುರಿಯನ್ನು ಯೋಜನೆ ಹೊಂದಿದೆ.

ಬನವಾಸಿಯ ಸಮೀಪ ಹಾಡಲಗಿ-ಮದುರವಳ್ಳಿಯಲ್ಲಿ ಸಂಸ್ಥೆ 03 ಕೆರೆಗಳನ್ನು ಅಭಿವೃದ್ಧಿಗೆ ಆಯ್ಕೆ ಮಾಡಿದ್ದು ಈಗಾಗಲೇ ಹಾಡಲಗಿ ಹೊಸಕಟ್ಟಿ ಮತ್ತು ಮಲ್ಲಾಣಿಕಟ್ಟಿಯನ್ನು ಸಂಪೂರ್ಣ ಅಭಿವೃದ್ಧಿಪಡಿಸಿದೆ.

"ಮೊದಲು ನಮ್ಮ ಗ್ರಾಮದ ಹೊಸಕಟ್ಟಿ ಕೆರೆ ಸಂಪೂರ್ಣ ಹೂಳಿನಿಂದ ತುಂಬಿ ಹೋಗಿತ್ತು. ಇದರ ಹೂಳು ತೆಗೆದು ಅಭಿವೃದ್ಧಿಪಡಿಸಲು ಅನೇಕ ಬಾರಿ ಸರ್ಕಾರಕ್ಕೆ ಮನವಿ ಮಾಡಿದರೂ ಏನು ಪ್ರಯೋಜನವಾಗಿಲ್ಲ. ಒಂದು ವರ್ಷದ ಹಿಂದೆ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರು ಬಂದು ನಿಮ್ಮೂರಿನ ಕೆರೆಗಳನ್ನು ಅಭಿವೃದ್ಧಿ ಪಡಿಸುತ್ತೇವೆ ಎಂದಾಗ ನಂಬಲು ಸಾಧ್ಯವಾಗಲಿಲ್ಲ. ನಂತರ ಸ್ಥಳೀಯ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ ಅವರನ್ನು ಸಂಪರ್ಕಿಸಿದಾಗ ಮನುವಿಕಾಸ ಉತ್ತಮ ಸಂಸ್ಥೆಯಾಗಿದ್ದು ಸಂಪೂರ್ಣ ಸಹಕಾರ ನೀಡಿರಿ ಎಂದರು. ಸಂಸ್ಥೆ ಕೇವಲ 15 ದಿನಗಳಲ್ಲಿ ಅನೇಕ ಯಂತ್ರಗಳನ್ನು ಹಾಕಿ ನಮ್ಮೂರಿನ ಹೊಸಕಟ್ಟಿ ಮತ್ತು ಮಲ್ಲಾಣಿಕಟ್ಟಿ ಕೆರೆಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಿದೆ" ಎಂದು ಹಾಡಲಗಿಯ ಶ್ರೀ ಮಂಜುನಾಥ ನಾಯ್ಕ ಹೇಳುತ್ತಾರೆ.







ಸಂಪೂರ್ಣ ಪುನರುಜ್ಜೀವನಗೊಂಡಿರುವ ಹಾಡಲಗಿ ಗ್ರಾಮದ ಹೊಸಕಟ್ಟಿ ಕೆರೆ

ಸ್ಥಳೀಯ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರವರು – "ಮನುವಿಕಾಸ ಸಂಸ್ಥೆ ನನ್ನ ಕ್ಷೇತ್ರದಲ್ಲಿ 09 ಕೆರೆಗಳು ಮತ್ತು ಪಕ್ಕದ ಸೊರಬದ ಹೊಸೂರಿನಲ್ಲಿ ಒಂದು ಕೆರೆಯನ್ನು ಬಹಳ ಸಮರ್ಪಕವಾಗಿ ಅಭಿವೃದ್ಧಿಪಡಿಸುತ್ತಿದೆ. ಅನೇಕ ಕೆರೆಗಳ ಕೆಲಸವನ್ನು ನಾನು ಪರಿವೀಕ್ಷಿಸಿದ್ದು ಸಂಸ್ಥೆ ಬಹಳ ವಿದಾಯಕವಾದ ಕೆಲಸ ಮಾಡುತ್ತಿದೆ. ನಾನು ನನ್ನ ಕ್ಷೇತ್ರದ ರೈತರ ಪರವಾಗಿ ಸಂಸ್ಥೆಗೆ ಅಭಿನಂದನೆ ಸಲ್ಲಿಸುತ್ತೇನೆ. ಮನುವಿಕಾಸ ಸಂಸ್ಥೆ ಒಂದು ಕಡೆ ಕೆರೆಹೂಳೆತ್ತುವ ಕೆಲಸಮಾಡುತ್ತಿದೆ, ಇನ್ನೊಂದು ಕಡೆ ಸರ್ಕಾರ ಈ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ವಿವಿಧ ಕಂಪನಿಗಳ ನೆರವಿನಿಂದ ಮನುವಿಕಾಸ ಸಂಸ್ಥೆ ಕೆರೆ ಅಭಿವೃದ್ಧಿಪಡಿಸುವ ಮೂಲಕ ರೈತರ ಬದುಕಿಗೆ ಹೊಸ ಶಕ್ತಿಯನ್ನು ತುಂಬುವ ಕೆಲಸವನ್ನು ಮಾಡುತ್ತಿದೆ. ಬಹುಜನರ ಮತ್ತು ಬಹುದಿನಗಳ ಆಶೋತ್ತರವಾದ ಕೆರೆಗಳ ಹೂಳೆತ್ತುವ ಕೆಲಸ ಮಾಡುತ್ತಿರುವ ಮನುವಿಕಾಸ ಸಂಸ್ಥೆ ಈ ಭಾಗದ ರೈತರ ಭಾಗ್ಯದ ಬಾಗಿಲನ್ನು ತೆರೆಸಿದೆ. ನಾನು ಸಂಸ್ಥೆಯ ಕೆಲಸಕ್ಕೆ ಋಣಿಯಾಗಿದ್ದೇನೆ" ಎನ್ನುತ್ತಾರೆ.

ಕೆರೆಗಳಲ್ಲಿ ಅಧಿಕ ಪ್ರಮಾಣದ ನೀರು ಸಂಗ್ರಹವಾದಂತೆ ಮೀನು ಸಾಕಣಿಕೆಯಿಂದಲೂ ಗ್ರಾಮಸ್ಥರಿಗೆ ಅಧಿಕ ಆದಾಯ ಬರುತ್ತದೆ. ಹೊಸೂರಿನ ಜನರು ಕೆರೆಯನ್ನು ಮಾಧ್ಯಮವಾಗಿ ಇಟ್ಟುಕೊಂಡು ಪ್ರತಿ ಮನೆಯವರೂ ಊರಿನ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಪ್ರತಿ ಮನೆಯಿಂದ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳನ್ನು ನಮ್ಮ ಗ್ರಾಮಾಭಿವೃದ್ಧಿ ಸಮಿತಿಗೆ ಕೊಡಬೇಕು. ಅದಕ್ಕೆ ಪ್ರತಿಯಾಗಿ ನಮ್ಮೂರಿನ ಕೆರೆಯಲ್ಲಿ ಉತ್ಪಾದನೆಯಾದ ಮೀನನ್ನು ಎಲ್ಲ ಮನೆಗಳಿಗೆ ಸಮಾನವಾಗಿ ಹಂಚುತ್ತೇವೆ. ಗ್ರಾಮಾಭಿವೃದ್ಧಿ ಸಮಿತಿಯಲ್ಲಿ ಸಂಗ್ರಹವಾದ ಹಣದಿಂದ ಊರಿನ ರಸ್ತೆ, ದೇವಸ್ಥಾನ ಅಭಿವೃದ್ಧಿ, ಹಬ್ಬಗಳ ಆಚರಣೆ ಮಾಡುತ್ತೇವೆ. ಈಗ ಮನುವಿಕಾಸ ಸಂಸ್ಥೆಯವರು ಹೂಳು ತುಂಬಿದ ಕೆರೆಯನ್ನು ಸಂಪೂರ್ಣ ಹೂಳೆತ್ತಿ ಅಭಿವೃದ್ಧಿಪಡಿಸಿದ್ದರಿಂದ ಇನ್ನು 10 ಪಟ್ಟು ಅಧಿಕ ಆದಾಯ ಬರುವ ನಿರೀಕ್ಷೆ ಇದೆ ಎಂದು ಗ್ರಾಮಾಭಿವೃದ್ಧಿ ಮುಖ್ಯಸ್ಥ ಶ್ರೀ ಮಂಚಪ್ಪ ಹೇಳುತ್ತಾರೆ. (ದೂ: 9483131284)

ಕೆರೆಯ ಹೂಳನ್ನು ಹೊಲಗಳಿಗೆ ಸಾಗಿಸುವುದರಿಂದ ಇನ್ನೂ ನಾಲ್ಕಾರು ವರ್ಷ ಗೊಬ್ಬರ ಹಾಕುವುದು ಕಡಿಮೆ ಮಾಡಬಹುದು. ಬೆಳೆಯಲ್ಲಿ ಮುಂಬರುವ ದಿನಗಳಲ್ಲಿ ಗಣನೀಯವಾದ ಏರಿಕೆ ಕಂಡುಬರುತ್ತದೆ ಎಂಬುದು ಎಲ್ಲ ರೈತರ ಅಭಿಪ್ರಾಯವಾಗಿದೆ.

ಸಂಸ್ಥೆ 164 ಎಕರೆ ವಿಸ್ತೀರ್ಣದ ಗುಡ್ನಾಪುರ ಕೆರೆ ಅಭಿವೃದ್ಧಿಗೆ ಸಾರ್ವಜನಿಕ ವಂತಿಗೆಯನ್ನೂ ಸಂಗ್ರಹಿಸುತ್ತಿದೆ. ಗುಡ್ನಾಪುರ ಬಂಗಾರೇಶ್ವರ ಸೇವಾ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಪರಶುರಾಮಪ್ಪ ಈಡೂರ ರೂ. 25 ಸಾವಿರ ದೇಣಿಗೆ ನೀಡಿ ಹಾರೈಸಿದ್ದಾರೆ. ಸುತ್ತಲೂ ಬದು ನಿರ್ಮಾಣ ಮಾಡುವುದರಿಂದ ರೈತರ ಹೊಲದಿಂದ ನೀರು ಕೆರೆಗೆ ಬರಲು ಪೈಪ್ ಅಳವಡಿಕೆ ಅನಿವಾರ್ಯವಾಗಿದ್ದು ಮತ್ತು ಮನುವಿಕಾಸ ಸಂಸ್ಥೆ ಕೇವಲ ಭಾಗಶಃ ಹೂಳೆತ್ತಲು ಶಕ್ತವಾಗಿದ್ದು ಸಾರ್ವಜನಿಕರ ಮತ್ತು ಸಂಘ ಸಂಸ್ಥೆಗಳ ನೆರವು ಅತ್ಯಗತ್ಯವಾಗಿದೆ.

ಸಂಸ್ಥೆ ಈ ಯೋಜನೆಯನ್ನು ರೂಪುಗೊಳಿಸಲು ಒಂದು ವರ್ಷದಿಂದ ಸತತ ಪ್ರಯತ್ನಿಸುತ್ತಿದೆ. ಕೋಕಾಕೋಲಾ ಫೌಂಡೇಶನ್ ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದ್ದು ಆಯ್ಕೆ ಪ್ರಕ್ರಿಯೆ ತುಂಬಾ ಕಠಿಣವಾಗಿದ್ದಾಗಿರುತ್ತದೆ. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಇವರ ಸತತ ಪರಿಶ್ರಮದಿಂದ ಈ ಯೋಜನೆ ಬನವಾಸಿ ಭಾಗದಲ್ಲಿ ಕಾರ್ಯಾರಂಭ ಗೊಂಡಿದೆ. ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ಮತ್ತು ರೈತರನ್ನು ಸಂಘಟಿಸಿ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಸಂಸ್ಥೆಯ ಸಂಸ್ಥಾಪಕ ಶ್ರೀ ಹರಿಶ್ಚಂದ್ರ ಭಟ್ಟ, ಸಿಬ್ಬಂದಿಗಳಾದ ಶ್ರೀ ಅಶ್ವತ್ಥ ನಾಯ್ಕ, ಶ್ರೀ ಅರುಣ ನಾಯ್ಕ, ಶ್ರೀ ಡಿ. ಜಿ. ಭಟ್ಟ, ಮತ್ತು ಶ್ರೀ ರಾಘವೇಂದ್ರ ಭಟ್ಟ ಇವರ ಐದು ಜನರ ತಂಡ ಸತತ ಶ್ರಮಿಸುತ್ತಿದೆ.

ಯೋಜನೆಯ ಕೆಲಸ ಕಾರ್ಯಗಳನ್ನು ದೇಶ ವಿದೇಶಗಳಿಂದ ಆಗಮಿಸಿದ ಅನೇಕ ಸಂಘ ಸಂಸ್ಥೆಗಳ ಪ್ರಮುಖರು ವೀಕ್ಷಿಸಿ ಮುಂಬರುವ ದಿನಗಳಲ್ಲಿ ತಾವೂ ಕೈ ಜೋಡಿಸುವುದಾಗಿ ತಿಳಿಸಿದ್ದಾರೆ. ಇಡಲ್‌ಗಿವ್ ಫೌಂಡೇಶನ್‌ನಿಂದ ಶ್ರೀಮತಿ ವಿಜಯತಾ ಅವರು ತಾವೂ ಕೆಲವು ಕೆರೆಗಳಿಗೆ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ನಬಾರ್ಡ ಅಧಿಕಾರಿಗಳು ಕೆಲಸ ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದ್ದಾರೆ. ಮನುವಿಕಾಸ ಸಂಸ್ಥೆ ನಮ್ಮ ಬನವಾಸಿ ವಲಯದಲ್ಲಿರುವ ದೊಡ್ಡ ದೊಡ್ಡ ಕೆರೆಗಳಷ್ಟೇ ಅಲ್ಲದೇ ಸಣ್ಣ ಕೆರೆಗಳನ್ನೂ ಹೂಳೆತ್ತಿ ಅಭಿವೃದ್ಧಿಪಡಿಸಬೇಕು. ಸುಮಾರು 100 ಕೆರೆಗಳು ನಮ್ಮ ಭಾಗದಲ್ಲಿದ್ದು ಈಗಾಗಲೇ ವಿವರಗಳನ್ನು ಸಂಸ್ಥೆಗೆ ಒದಗಿಸಲಾಗಿದೆ. ಸಂಸ್ಥೆಗೆ ಸರ್ಕಾರದಿಂದ ಅವಶ್ಯಕವಿರುವ ಅನುಮತಿ ಇತ್ಯಾದಿ ಸಹಕಾರ ನೀಡಲಾಗುವುದು. ಸಂಸ್ಥೆಯು ಕೆರೆ ಅಭಿವೃದ್ಧಿ ಮತ್ತು ಇತರ ಗ್ರಾಮೀಣ ಅಭಿವೃದ್ಧಿಯಲ್ಲಿ ನಡೆಸುವ ಕೆಲಸ ಅಸಾಧಾರಣವಾದುದು ಮತ್ತು ಈ ಭಾಗದ ಜನರ ಮನಸ್ಸಿನಲ್ಲಿ ಸಂಸ್ಥೆ ನೆಲೆ ನಿಂತಿದೆ ಎನ್ನುತ್ತಾರೆ ಜಿಲ್ಲಾ ಪಂಚಾಯತ ಸದಸ್ಯೆ ಶ್ರೀಮತಿ ರೂಪಾ ನಾಯ್ಕ.


**ಹೊಸೂರು ಕೆರೆ, ತಾ. ಸೊರಬ**
**ಕಾಮಗಾರಿ ಮೊದಲು**


**ಕಾಮಗಾರಿ ಹಂತ**


**ಕಾಮಗಾರಿ ಪೂರ್ಣಗೊಂಡಿರುವುದು.**


**ಡ್ರೋನ್ ಕ್ಯಾಮರಾ ಕಣ್ಣಿಗೆ ಕಂಡಂತೆ ಹೊಸೂರು ಕೆರೆ**

# ಮನುವಿಕಾಸದಿಂದ ಸಣ್ಣ ಕೆರೆ ಮತ್ತು ಕೃಷಿ ಹೊಂಡ ನಿರ್ಮಾಣ

ಮನುವಿಕಾಸ ಸಂಸ್ಥೆ ಕರ್ಜಗಿ ಸಿದ್ದಾಪುರ ಇವರಿಂದ ದೇಶಪಾಂಡೆ ಪ್ರತಿಷ್ಠಾನ ಹುಬ್ಬಳ್ಳಿ, ಎಚ್. ಡಿ. ಬಿ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್ ಇವರ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಶಿರಸಿ, ಯಲ್ಲಾಪುರ ಮತ್ತು ಮುಂಡಗೋಡ ತಾಲೂಕುಗಳಲ್ಲಿ ಸಣ್ಣ ಕೆರೆ ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ. ರೈತರಿಗೆ ಕಡಿಮೆ ದರದಲ್ಲಿ ಕೃಷಿ ಹೊಂಡ ಮತ್ತು ಸಣ್ಣ ಕೆರೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ. ಸುಮಾರು 30 ಅಡಿ ಉದ್ದದ 30 ಅಡಿ ಅಗಲದ ಮತ್ತು 10 ಅಡಿ ಆಳದ ಕೃಷಿ ಹೊಂಡಕ್ಕೆ ರೂ. 5000 ರೈತರು ವಂತಿಕೆ ನೀಡಬೇಕಾಗುತ್ತದೆ. ಒಂದು ಕೆರೆಗೆ ರೂ. 5000 ವಂತಿಗೆ ನೀಡುವ ಯೋಜನೆ ಸದ್ಯದಲ್ಲಿ ಮುಕ್ತಾಯದ ಹಂತದಲ್ಲಿದೆ.

ಮನುವಿಕಾಸ ಸಂಸ್ಥೆ ಕೆರೆ ಅಭಿವೃದ್ಧಿಪಡಿಸುವ ರೈತರಿಗೆ ಕಡಿಮೆ ದರದಲ್ಲಿ ಹಿಟಾಚಿ ಯಂತ್ರ ಒದಗಿಸುವುದರೊಂದಿಗೆ ಯಂತ್ರಗಳನ್ನು ಉಚಿತವಾಗಿ ಸಾಗಾಣಿಕೆ ಮಾಡಿಕೊಡುತ್ತಿದೆ. ಕೇವಲ ಒಂದು ಕೆರೆಗಾಗಿ ಬೇಡಿಕೆ ಇಟ್ಟರೂ ಯಂತ್ರ ಕಳುಹಿಸುವ ಬದ್ಧತೆಯನ್ನು ಸಂಸ್ಥೆ ಅನುಸರಿಸುತ್ತಾ ಬಂದಿದೆ.



ಸಂಸ್ಥೆ ಈವರೆಗೆ 2500 ಕ್ಕೂ ಹೆಚ್ಚು ಸಣ್ಣ ಕೆರೆಗಳನ್ನು ಅಭಿವೃದ್ಧಿಪಡಿಸಿದ್ದು ವರ್ಷಕ್ಕೆ 200 ಕೋಟಿ ಲೀಟರ್ ನೀರನ್ನು ಈ ಕೆರೆಗಳು ಹಿಡಿದಿಡುವ ಸಾಮರ್ಥ್ಯ ಹೊಂದಿವೆ. ಸಣ್ಣ ಕೆರೆ ಮತ್ತು ಕೃಷಿ ಹೊಂಡ ನಿರ್ಮಾಣಕ್ಕೆ ಸರ್ಕಾರದ ಯಾವುದೇ ಸಹಾಯಧನ ಸಂಸ್ಥೆಗೆ ಲಭ್ಯವಿರುವುದಿಲ್ಲ.






ಬೆಟ್ಟ ಮತ್ತು ಸಾಮೂಹಿಕ ಜಾಗಗಳಲ್ಲಿ ಸಂಸ್ಥೆ 100 ಕ್ಕೂ ಹೆಚ್ಚು ಸಣ್ಣ ಕೆರೆಗಳನ್ನು ಮತ್ತು 10000 ಇಂಗು ಗುಂಡಿಗಳನ್ನು ಉಚಿತವಾಗಿ ನಿರ್ಮಿಸಿದೆ. ಮೂರಕ್ಕಿಂತ ಹೆಚ್ಚು ಅತೀ ಬಡ ಕುಟುಂಬಗಳಿಗೆ ಸಹಾಯವಾಗುವ ಸಂದರ್ಭದಲ್ಲಿ ಉಚಿತವಾಗಿ ಕೆರೆಗಳನ್ನು ನಿರ್ಮಿಸಿ ಕೊಡಲಾಗಿದೆ.



ಬೆಟ್ಟ ಭೂಮಿಯಲ್ಲಿ ನೀರು ಇಂಗಿಸುವ ವಿವಿಧ ಮಾದರಿಗಳನ್ನು ಹೊಂದಲು ಮತ್ತು ಇಂಗುಗುಂಡಿಗಳನ್ನು ನಿರ್ಮಿಸಲು ಆಸಕ್ತಿ ಇರುವ ರೈತರು ಸಂಸ್ಥೆಯನ್ನು ಸಂಪರ್ಕಿಸಬಹುದಾಗಿದೆ. ಸಣ್ಣ ಇಂಗುಗುಂಡಿಗಳ ನಿರ್ಮಾಣವನ್ನು ಸಂಸ್ಥೆ ಉಚಿತವಾಗಿ ಮಾಡಿಕೊಡುತ್ತದೆ. ಹೆಚ್ಚಿನ ಮಾಹಿತಿಗೆ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟ ಮೊಬೈಲ್ ಸಂಖ್ಯೆ: 9845982552 ಇವರನ್ನು ಸಂಪರ್ಕಿಸಬಹುದಾಗಿದೆ.

## ಮನುವಿಕಾಸ ಸಂಸ್ಥೆಯಲ್ಲಿ ಸ್ವಯಂ ಸೇವಕಿಯಾಗಿ ಕಾರ್ಯನಿರ್ವಹಿಸಿದ ವಿದೇಶಿ ಯುವತಿಯ ಅಭಿಪ್ರಾಯ



During my six months of volunteer work with MANUVIKASA, I have become familiar with many of its programme. What I would like to paint out about their work is the visible impact it has on underprivileged farmers, children and women in the area.

Also I experienced a huge amount of team work between the staff members as well as passion and strong commitment to spreading livelihood and education.

Take this opportunity to thank all the staff members and especially Mr. Ganapati Bhat, for support and feedback during my tenure. Wish them all the best for their future and I am certain that the world become better place through their work.

With the Best wishes
Clara
From Hennef Germany

# ಮನುವಿಕಾಸ ಸಂಸ್ಥೆಯಿಂದ ಉತ್ತರಕನ್ನಡ ಜಿಲ್ಲೆಯಲ್ಲಿ ಇ-ಶಕ್ತಿ ಯೋಜನೆ ಅನುಷ್ಠಾನ

ಮನುವಿಕಾಸ ಸಂಸ್ಥೆ ಸಿರಸಿ ಇವರು ನಬಾರ್ಡ ಸಹಯೋಗದಲ್ಲಿ ಸ್ವ-ಸಹಾಯ ಸಂಘಗಳ ಗಣಕೀಕರಣಗೊಳಿಸುವ ಇ-ಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಮೊಬೈಲ್ ಅಪ್ಲಿಕೇಶನ್ ಮೂಲಕ ಸ್ವ-ಸಹಾಯ ಸಂಘಗಳ ಪುಸ್ತಕ ನಿರ್ವಹಣೆ ಕುರಿತು ಜಿಲ್ಲೆಯಲ್ಲಿ 80 ಸ್ವಯಂ ಸೇವಕರನ್ನು ನೇಮಿಸಿ ತರಬೇತಿಗೊಳಿಸಿ ಪ್ರತಿ ಸ್ವಯಂ ಸೇವಕರಿಗೆ ತಲಾ 30 ಸಂಘಗಳ ಉಸ್ತುವಾರಿ ಹೊಣೆಯನ್ನು ನೀಡಲಾಗುತ್ತದೆ.

ಈ ಶಕ್ತಿ ಮೊಬೈಲ್ ಅಪ್ಲಿಕೇಶನ್ ತರಬೇತಿ ದಿನಾಂಕ 04.06.2018 ರಂದು ರೋಟರಿ ಕ್ಲಬ್ ಸಭಾಭವನದಲ್ಲಿ ನಡೆಯಿತು. ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ನಬಾರ್ಡ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಎಸ್. ಎಲ್. ಯೋಗೇಶ್ ಮಾತನಾಡಿ ದೇಶದ ಪ್ರಧಾನಮಂತ್ರಿಗಳ ಆಶಯದೊಂದಿಗೆ ಪ್ರಾರಂಭವಾದ ಆರ್ಥಿಕ ಸೇರ್ಪಡೆಯ ಭಾಗವಾದ ಈಶಕ್ತಿ ಯೋಜನೆ ಈಗಾಗಲೇ ಪ್ರಾಯೋಗಿಕವಾಗಿ ನಬಾರ್ಡ ಸಹಕಾರದಲ್ಲಿ ಮೈಸೂರಿನಲ್ಲಿ ಅನುಷ್ಠಾನಗೊಂಡಿದೆ. ಪ್ರಸ್ತುತ ಹೊಸ ನಾಲ್ಕು ಜಿಲ್ಲೆಗಳಲ್ಲಿ ಈಶಕ್ತಿ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ದೇಶದಲ್ಲಿ 25 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ 02ನೇ ಹಂತದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು ನಮ್ಮ ಉತ್ತರ ಕನ್ನಡ ಜಿಲ್ಲೆ ಈ ಯೋಜನೆಯಡಿ ಆಯ್ಕೆ ಆಗಿರುವುದು ಸಂತೋಷವಾಗಿದೆ ಎಂದರು. ಮನುವಿಕಾಸ ಸಂಸ್ಥೆ ಈ ಯೋಜನೆಯನ್ನು ಮುತುವರ್ಜಿ ವಹಿಸಿ ಅನುಷ್ಠಾನಗೊಳಿಸುತ್ತಿರುವುದು ಸಂತೋಷಕರ ವಿಷಯ. ಈಗಾಗಲೇ ಸಂಸ್ಥೆ 2500 ಕ್ಕೂ ಹೆಚ್ಚು ಸ್ವ-ಸಹಾಯ ಸಂಘಗಳನ್ನು ಗಣಕೀರಣಗೊಳಿಸಿ 80 ಸ್ವಯಂ ಸೇವಕರಿಗೆ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಮೊಬೈಲ್ ಅಪ್ಲಿಕೇಶನ್ ತರಬೇತಿ ನೀಡುತ್ತಿದೆ ಎಂದರು.




ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ಟ ಮಾತನಾಡಿ ಮನುವಿಕಾಸ ಸಂಸ್ಥೆ ಬಡ ಮಹಿಳೆಯರನ್ನು ಸ್ವ-ಸಹಾಯ ಸಂಘಗಳ ಮೂಲಕ ಸಂಘಟಿಸಿ ಆರ್ಥಿಕವಾಗಿ ಅವರನ್ನು ಸದೃಢಗೊಳಿಸಲು ಕಳೆದ 10 ವರ್ಷಗಳಿಂದ ಶ್ರಮಿಸುತ್ತಿದೆ. ಈಗಾಗಲೇ 1250 ಕ್ಕೂ ಹೆಚ್ಚು ಸಂಘಗಳು ಸಂಸ್ಥೆಯ ಅಡಿ ಕಾರ್ಯ ನಿರ್ವಹಿಸುತ್ತಿವೆ. ಇ-ಶಕ್ತಿ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲು ನಬಾರ್ಡ ಮನುವಿಕಾಸ ಸಂಸ್ಥೆಯನ್ನು ಗುರುತಿಸಿ ಜವಾಬ್ದಾರಿ ನೀಡಿದೆ. ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳಾದ ದೇಶಪಾಂಡೆ ಆರ್‌ಸೆಟಿ, ಕೆ.ಡಿ.ಡಿ.ಸಿ., ಮೈರಾಡ ಮತ್ತು ವಿವಿಧ ಬ್ಯಾಂಕುಗಳಾದ ಕೆ.ಡಿ.ಸಿ.ಸಿ. ಬ್ಯಾಂಕ್, ಕೆ.ವಿ.ಜಿ ಬ್ಯಾಂಕ್ ಈ ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡುತ್ತಿವೆ. ಸ್ವ-ಸಹಾಯ ಸಂಘಗಳ ವ್ಯವಹಾರ ಪಾರದರ್ಶಕವಾಗಿರಿಸಲು ಇ-ಶಕ್ತಿ ಯೋಜನೆ ಸಹಕಾರಿಯಾಗಲಿದೆ ಎಂದರು.

ಹೈದರಾಬಾದಿನ ಯೆಸ್ ಟೀಮ್ ಸಿಸ್ಟಮ್‌ನಿಂದ ಶ್ರೀ ಮಹಾಂತೇಶ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ತರಬೇತಿಯಲ್ಲಿ 40 ಸ್ವಯಂ ಸೇವಕರು ಮುಂಡಗೋಡ, ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕಿನಿಂದ ಆಗಮಿಸಿದ್ದರು.

ಪ್ರಾರಂಭದಲ್ಲಿ ಮನುವಿಕಾಸ ಸಂಸ್ಥೆಯ ಶ್ರೀ ಹರ್ಷ ಕಬ್ಬೂರ ಸ್ವಾಗತಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ಬಸಪ್ಪ ಉಗ್ಗಿನಕೇರಿ ವಂದಿಸಿದರು.

ಅದೇ ರೀತಿ ಅಂಕೋಲಾ ಮತ್ತು ದಾಂಡೇಲಿಯಲ್ಲಿಯೂ ತರಬೇತಿ ನಡೆಯಿತು. ದಾಂಡೇಲಿಯಲ್ಲಿ ದಿನಾಂಕ 13.06.2018 ರಂದು ಪಿ. ಡಬ್ಲ್ಯು. ಡಿ ಐಬಿಯಲ್ಲಿ ನಡೆದ ತರಬೇತಿಯನ್ನು ನಬಾರ್ಡ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಎಸ್. ಎಲ್. ಯೋಗೇಶ್ ನಡೆಸಿದರು. ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಶಾರದಾ ಉಪಸ್ಥಿತರಿದ್ದರು.

ದಿನಾಂಕ 08.06.2018 ರಂದು ತಾಲೂಕಾ ಪಂಚಾಯತ ಸಭಾಭವನ ಅಂಕೋಲಾದಲ್ಲಿ ನಡೆದ ತರಬೇತಿಯನ್ನು ತಾಲೂಕಾ ಪಂಚಾಯತ ಅಧ್ಯಕ್ಷೆ ಶ್ರೀಮತಿ ಸುಜಾತಾ ಗಾಂವಕರ್ ಉದ್ಘಾಟಿಸಿ ಮಾತನಾಡಿ ಇಂದು ಎಲ್ಲ ರಂಗದಲ್ಲಿ ಗಣಕೀರಣ ವ್ಯವಸ್ಥೆ ಜಾರಿಗೆ ಬಂದಿದೆ. ಮಹಿಳಾ ಸಂಘಗಳ ಪುಸ್ತಕ ನಿರ್ವಹಣೆಯಲ್ಲಿ ಗಣಕೀಕರಣವಾಗುತ್ತಿರುವುದು ಮಹಿಳೆಯರ ಆರ್ಥಿಕ ಸ್ಥಿತಿಗತಿ ಏರಿಕೆಯಲ್ಲಿ ಒಂದು ಕ್ರಾಂತಿಯಾದಂತೆ ಎಂದರು.



ಅಂಕೋಲಾ ತಾ.ಪಂ. ಅಧ್ಯಕ್ಷೆ ಶ್ರೀಮತಿ ಸುಜಾತಾ ಗಾಂವ್ಕರ್
ಇವರು ಸ್ವಯಂ ಸೇವಕಿಯರಿಗೆ ಮೊಬೈಲ್ ವಿತರಿಸುತ್ತಿರುವುದು.




ನಬಾರ್ಡ್ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಎಸ್. ಎಲ್. ಯೋಗೇಶ
ಇ-ಶಕ್ತಿ ಯೋಜನೆ ಕುರಿತು ಸ್ವಯಂ ಸೇವಕರಿಗೆ ಮಾಹಿತಿ ನೀಡುತ್ತಿರುವುದು.

# ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಿಗೆ ವ್ಯಕ್ತಿತ್ವ ವಿಕಸನ ತರಬೇತಿ

ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಿಗೆ ಜೂನ್ 14 ಮತ್ತು 15 ರಂದು ರೋಟರಿ ಶಿರಸಿಯ ಸೆಂಟರಿನಲ್ಲಿ 02 ದಿನಗಳ ಕಾಲ ಕೌಶಲ ಅಭಿವೃದ್ಧಿ ತರಬೇತಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶಿರಸಿ ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಪ್ರವೀಣ ಕಾಮತ್ ಉದ್ಘಾಟಿಸಿದರು. ಕೌಶಲ ಹೊಂದಿದ ವ್ಯಕ್ತಿಗೆ ಸಮಾಜದಲ್ಲಿ ವಿಶೇ..ಷವಾದ ಗೌರವವಿದೆ. ಉತ್ತಮ ಕೌಶಲ ಹೊಂದಿದ ವ್ಯಕ್ತಿಗೆ ತಾವು ನಿರ್ವಹಿಸುವ ಕೆಲಸವೂ ಸುಲಭವಾಗುತ್ತದೆ ಎಂದರು.




ತರಬೇತಿ ಉದ್ದೇಶಿಸಿ ಮಾತನಾಡುತ್ತಿರುವ ರೋಟರಿ ಅಧ್ಯಕ್ಷ ಶ್ರೀ ಪ್ರವೀಣ ಕಾಮತ್

ತರಬೇತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಭಟ್ಟ, ನಿರ್ದೇಶಕರಾದ ಶ್ರೀ ಗಣಪತಿ ಭಟ್ ಹಾಗೂ ಪ್ರಗತಿಮಿತ್ರ ಸೌಹಾರ್ದ ಸಹಕಾರಿಯ ಸಲಹೆಗಾರರಾದ ಶ್ರೀ ಡಿ. ಜಿ. ಭಟ್ಟ ಉಪಸ್ಥಿತರಿದ್ದರು. ತರಬೇತಿಯಲ್ಲಿ ಸಿಬ್ಬಂದಿಗಳಿಗೆ ತಮ್ಮ ಕೌಶಲ್ಯಾಭಿವೃದ್ಧಿಯ ಬೆಳವಣಿಗೆಯ ಕುರಿತು ಮಾಹಿತಿ ಯನ್ನು ನೀಡಿದರು.

ಮೊದಲಿಗೆ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ ರವರು ಕೆಲವು ಮನೋರಂಜನಾ ಆಟಗಳನ್ನು ಆಡಿಸುವುದರ ಮೂಲಕ ಸಿಬ್ಬಂದಿಗಳನ್ನು ಪ್ರೇರೇಪಿಸಿದರು. ನಂತರ ಸಂಸ್ಥೆಯ ನೀತಿ–ನಿಯಮಗಳನ್ನು ತಿಳಿಸಿದರು. ನಂತರ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾದ ರೋ. ಶ್ರೀ ಅನಂತ ಪದ್ಮನಾಭ [LIC Development Officer] ಇವರು ಸಂವಹನದ ಕೌಶಲ್ಯಗಳು ಎಂಬ ವಿಷಯದ ಬಗ್ಗೆ ಮಾಹಿತಿ ನೀಡಿದರು. ಹೇಗೆ ನಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕು, ಜನರ ಜೊತೆ ಮಾತನಾಡುವ ರೀತಿ, ಮಾತಿಗೆ ಸ್ಪಂದನೆ ನೀಡುವುದು ಹೇಗೆ, ಗ್ರಹಿಕಾ ಸಾಮರ್ಥ್ಯ ಹೇಗೆ ಇತ್ಯಾದಿ ಹಲವು ವಿಷಯಗಳ ಬಗ್ಗೆ ಉತ್ತಮವಾಗಿ ತಮ್ಮ ಜ್ಞಾನವನ್ನು ಹಂಚಿದರು. ಇನ್ನೊಬ್ಬ ಸಂಪನ್ಮೂಲ ವ್ಯಕ್ತಿಗಳಾದ ಅಜಿತ್ ನಾಡಿಗ್‌ರವರು ಗ್ರಾಮೀಣ ಅಭಿವೃದ್ಧಿ ಮತ್ತು ರಾಷ್ಟ್ರೀಯತೆ ಎಂಬ ವಿಷಯದ ಕುರಿತು ಮಾತನಾಡಿದರು. ಹಳ್ಳಿಗಳು ನಗರಗಳ ಮೂಲವಾಗಿದೆ, ಜನರು ಹಳ್ಳಿಗಳನ್ನು ತ್ಯಜಿಸಬಾರದು ಹಾಗೇ ಪೇಟೆಯ ವ್ಯಾಮೋಹವನ್ನು ಬಿಡಬೇಕು ಎಂದು ಹೇಳಿದರು. ಹಳ್ಳಿಗಳು ನಮ್ಮ ಪ್ರಕೃತಿಯ ಕೈಗನ್ನಡಿಯಾಗಿವೆ, ಅವುಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಕಿವಿಮಾತನ್ನು ಹೇಳಿದರು. ರಾಷ್ಟ್ರೀಯತೆ ಬಗ್ಗೆ ಮಾತನಾಡುತ್ತಾ ಸ್ವಾಮಿ ವಿವೇಕಾನಂದರು ಹಾಗೂ ವೀರ ಸಾವರಕರ್‌ರವರ ರಾಷ್ಟ್ರೀಯತೆಯ ಹೋರಾಟದ ಅನೇಕ ಉದಾಹರಣೆಗಳನ್ನು ನೀಡಿದರು.



ಎರಡನೇ ದಿನ ರೋಟರಿ ಕ್ಲಬ್ಬಿನ ಕಾರ್ಯದರ್ಶಿಗಳೂ ಮತ್ತು ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ರೋ. ಶ್ರೀ ಬಿ. ಡಿ. ಕಾರಂತ ಅವರು ವ್ಯಕ್ತಿತ್ವ ವಿಕಸನ ಮತ್ತು ಅಟಿಟ್ಯೂಡ್ ಬಗ್ಗೆ ತರಬೇತಿ ನೀಡಿದರು.

# ಮನುವಿಕಾಸ ಸಂಸ್ಥೆಯಿಂದ ಅನಾಥ ಮತ್ತು ಬಡ ಮಕ್ಕಳಿಗೆ ಕಲಿಕೋಪಕರಣ ಹಾಗೂ ನಿತ್ಯೋಪಯೋಗಿ ವಸ್ತುಗಳ ವಿತರಣೆ

ಸಮಾಜದಲ್ಲಿ ಅನೇಕ ಮಕ್ಕಳು ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥರಾಗಿರುತ್ತಾರೆ. ಬೇರೆಯವರ ಆಶ್ರಯದಲ್ಲಿ ಇದ್ದು ಶಾಲೆ ಕಲಿಯುತ್ತಿರುತ್ತಾರೆ. ಕೆಲವು ಮಕ್ಕಳು ತಂದೆಯನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಬೆಳೆಯುತ್ತಿರುತ್ತಾರೆ. ಈ ರೀತಿ ವಿಧವಾ ತಾಯಂದಿರು ಕೂಲಿ ಮಾಡಿ ಮಕ್ಕಳನ್ನು ಶಾಲೆಗೆ ಕಳಿಸುತ್ತಿರುತ್ತಾರೆ. ಇಂತಹ ಕಡುಬಡ ಮಕ್ಕಳು ಮತ್ತು ನಿರ್ಘತಿಕ ಮಕ್ಕಳು ಎಷ್ಟೋ ಅಗತ್ಯ ವಸ್ತುಗಳಿಂದ ವಂಚಿತರಾಗಿರುತ್ತಾರೆ. ಎಷ್ಟೋ ಮಕ್ಕಳಿಗೆ ಶಾಲಾ ಸಮವಸ್ತ್ರ ಹೊರತುಪಡಿಸಿದರೆ ಬೇರೆ ಸಾದಾ ಕಲರ್ ಡ್ರೆಸ್ ಕೂಡ ಇರುವುದಿಲ್ಲ.

ನಿರ್ಗತಿಕ ಮಕ್ಕಳಿಗೆ ಆಶ್ರಯ ನೀಡಿದ ಸಂಬಂಧಿಗಳು ಮತ್ತು ವಿಧವಾ ತಾಯಂದಿರು ಮಕ್ಕಳ ಎಷ್ಟೋ ಅವಶ್ಯಕ ವಸ್ತುಗಳನ್ನು ಕೊಡಿಸುವುದಿಲ್ಲ. ಅವರಿಗೆ ತಮ್ಮ ಜೀವನ ನಡೆಸಿ ಮಕ್ಕಳಿಗೆ ಆಹಾರ ಒದಗಿಸುವುದೇ ದೊಡ್ಡ ಸಮಸ್ಯೆ. ಬರಿಗಾಲಿನಲ್ಲಿ ಶಾಲೆಗೆ ಹೋಗುವ ಮಕ್ಕಳು, ಮಳೆಯಲ್ಲಿ ಹರಿದ ಕೊಡೆ ಹಿಡಿದು ಅರ್ಧ ದೇಹವನ್ನು ಒದ್ದೆ ಮಾಡಿಕೊಂಡು ಬರುವ ಮಕ್ಕಳು ಮತ್ತು ಸ್ಕೂಲ್ ಬ್ಯಾಗ್‌ವಿಲ್ಲದೇ ಪುಸ್ತಕಗಳನ್ನು ಕೈಯ್ಯಲ್ಲೇ ಹಿಡಿದು ಓಡಾಡುವ ಮಕ್ಕಳು ಆಗಾಗ ನಮ್ಮ ಕಣ್ಣಿಗೆ ಬೀಳುತ್ತಿರುತ್ತಾರೆ. ಇದನ್ನು ಗಮನಿಸಿದ ಮನುವಿಕಾಸ ಸಂಸ್ಥೆ ಜಿಲ್ಲೆಯ ವಿವಿಧ ಶಾಲೆಗಳ ಮಕ್ಕಳಿಗೆ ಕಲಿಕೋಪಕರಣ ಮತ್ತು ನಿತ್ಯೋಪಯೋಗಿ ವಸ್ತುಗಳನ್ನು ವಿತರಿಸುತ್ತಿದೆ.

ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಾರಿಗುಡಿಯ 15 ಮಕ್ಕಳಿಗೆ ರೂ. 40000 ಸಾವಿರ ಮೌಲ್ಯದ ವಸ್ತುಗಳ ವಿತರಣೆ

ಮನುವಿಕಾಸ ಸಂಸ್ಥೆ ಶಿರಸಿ ಮತ್ತು ಗೀವ್ ಇಂಡಿಯ ಮುಂಬಯಿ ಇವರ ಸಹಯೋಗದಲ್ಲಿ ಸಿರಸಿಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಾರಿಗುಡಿಯ 15 ಮಕ್ಕಳಿಗೆ ಕಲಿಕೋಪಕರಣ ಮತ್ತು ನಿತ್ಯೋಪಯೋಗಿ ವಸ್ತುಗಳನ್ನು ದಿನಾಂಕ 01.06.2018 ರಂದು ವಿತರಿಸಲಾಯಿತು. ಉಪಕರಣ ವಿತರಿಸಿ ಮಾತನಾಡಿದ ಮನುವಿಕಾಸ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಹರಿಶ್ಚಂದ್ರ ಭಟ್– ಮನುವಿಕಾಸ ಸಂಸ್ಥೆ ಈಗಾಗಲೇ ಸಿದ್ದಾಪುರ, ಶಿರಸಿ, ಮುಂಡಗೋಡ, ಯಲ್ಲಾಪುರ ಮತ್ತು ಹಳಿಯಾಳ ತಾಲೂಕಿನ 1500 ಕ್ಕೂ ಹೆಚ್ಚು ತಂದೆ ಅಥವಾ ತಾಯಿ ಇಲ್ಲದ ಬಡಮಕ್ಕಳಿಗೆ ಮತ್ತು ಆರ್ಥಿಕವಾಗಿ ತೀರ ಹಿಂದುಳಿದ ಮಕ್ಕಳಿಗೆ ಕಲಿಕೋಪಕರಣ ಮತ್ತು ನಿತ್ಯೋಪಯೋಗಿ ವಸ್ತುಗಳನ್ನು ವಿತರಿಸಿದೆ. ಕಾಲೇಜು ವಿದ್ಯಾಭ್ಯಾಸದಲ್ಲಿ ತೊಡಗಿರುವ ಮಕ್ಕಳಿಗೆ ಶಿಷ್ಯವೇತನ ಕೂಡ ವಿತರಿಸಲಾಗುತ್ತಿದೆ ಎಂದರು.

ಒಟ್ಟು 10 ತಂದೆ ಅಥವಾ ತಾಯಿ ಇಲ್ಲದ ಮಕ್ಕಳಿಗೆ ಮತ್ತು 05 ಬಡ ವಿದ್ಯಾರ್ಥಿಗಳಿಗೆ 40000 ಮೌಲ್ಯದ ಬೆಡ್ ಶೀಟ್, ಚಾದರ, ಸ್ಕೂಲ್ ಬ್ಯಾಗ್, ಬಟ್ಟೆ, ಸೋಪ್, ಬ್ರಶ್, ಟಾವೆಲ್, ನೋಟ್ ಬುಕ್, ಶಬ್ದಕೋಶ ಮತ್ತು ವ್ಯಾಕರಣ ಪುಸ್ತಕ, ಷೂ, ರೇನ್ ಕೋಟ್, ಕೊಬ್ಬರಿ ಎಣ್ಣೆ, ಜಾಮೆಟ್ರಿ ಬಾಕ್ಸ್, ಮತ್ತಿತರ ವಸ್ತುಗಳನ್ನು ವಿತರಿಸಲಾಯಿತು.











ಮನುವಿಕಾಸ ಸಂಸ್ಥೆ ಬಡಮಕ್ಕಳನ್ನು ಗುರುತಿಸಿ ಶಾಲೆಗೆ ಬಂದು ಕಲಿಕೋಪಕರಣ ವಿತರಿಸಿರುವುದು ತುಂಬಾ ಸಂತೊಷವಾಗಿದೆ. ಸಂಸ್ಥೆಯಿಂದ ಉಪಕರಣ ಪಡೆದ ಮಕ್ಕಳು ಆತ್ಮವಿಶ್ವಾಸ ಹೊಂದಿ ಹೆಚ್ಚಿನ ವಿದ್ಯಾಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಾರಿಗುಡಿಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗಪ್ಪ. ಈ.ಎಚ್ ಕಿಟ್ ವಿತರಿಸಿ ಮಾತನಾಡಿದರು.

ಉಪಕರಣ ವಿತರಣೆಯಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಶಿಕ್ಷಕರಾದ ಶ್ರೀ ರಾಘವೇಂದ್ರ ಗದ್ದೆಮನೆ, ಶ್ರೀ ಎಮ್. ಎಸ್. ನಾಯ್ಕ, ಶ್ರೀಮತಿ ಭಾರತಿ ಗುಮ್ಮಾನಿ, ಶ್ರೀ ಎ. ಎ. ಚೌದರಿ, ಶ್ರೀ ಪ್ರಕಾಶ ಹೆಗಡೆ, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಗಣೇಶ ನಾಯ್ಕ, ಶ್ರೀಮತಿ ಶುಭಾ ಪೈ, ಕುಮಾರಿ ಯಶೋಧಾ ನಾಯ್ಕ, ಶ್ರೀ ನರಸಿಂಹ ಭಟ್ಟ ಉಪಸ್ಥಿತರಿದ್ದರು.

# ಮನುವಿಕಾಸ ಸಂಸ್ಥೆಯಿಂದ ಸ್ವ-ಸಹಾಯ ಸಂಘಗಳ ಪರಿಕಲ್ಪನಾ ತರಬೇತಿ ಕಾರ್ಯಕ್ರಮ

ಮನುವಿಕಾಸ ಸಂಸ್ಥೆ ಹಾಗೂ ಈಡಲ್‌ಗೀವ್ ಫೌಂಡೇಶನ್ ಸಹಭಾಗಿತ್ವದಲ್ಲಿ ಶಿರಸಿಯ ನಯನ ಸಭಾಂಗಣದಲ್ಲಿ ಸ್ವ-ಸಹಾಯ ಸಂಘಗಳ ತರಬೇತಿ ಕಾರ್ಯಕ್ರಮ **23..06.2018** ಮತ್ತು **24.06.2018** ರಂದು ಎರಡು ದಿನ ನಡೆಯಿತು. ಮೊದಲ ದಿನದ ತರಬೇತಿಯನ್ನು ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀ ಜಿ. ಎನ್. ಹೆಗಡೆ ಮುರೇಗಾರ ಉದ್ಘಾಟಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯ ಕೆಲಸ ಕಾರ್ಯಗಳನ್ನು ಅನೇಕ ವರ್ಷಗಳಿಂದ ಗಮನಿಸುತ್ತಿದ್ದೇನೆ. ರೈತರಿಗೆ ಉತ್ಪಾದಕ ಕಂಪನಿ ಸ್ಥಾಪಿಸಿ ರೈತರ ಉತ್ಪನ್ನಗಳನ್ನು ಸುಲಭವಾಗಿ ಸಂಸ್ಕರಣೆ ಮಾಡಿಕೊಡುತ್ತಿದ್ದಾರೆ. ಮನುವಿಕಾಸ ನೀರು ಸಂರಕ್ಷಣೆ ಮತ್ತು ಕೆರೆ ಅಭಿವೃದ್ಧಿಯಲ್ಲಿ ಅತ್ಯುತ್ತಮ ಕೆಲಸ ನಿರ್ವಹಿಸುತ್ತಿದೆ. ಅವರ ಸಾಧನೆಗೆ ಶ್ಲಾಘನೆ ಮಾಡಲೇಬೇಕು ಎಂದರು. ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಸಂಸ್ಥೆ ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿದೆ. ನಾನು ನನ್ನ ಕ್ಷೇತ್ರದಲ್ಲಿ ಮಹಿಳಾ ಸಂಘಗಳಿಗೆ ಸಭೆ ನಡೆಸಲು ಪ್ರತೀ ವರ್ಷ ಒಂದು ಸಭಾಭವನ ಮಂಜೂರಿ ಮಾಡಿ ಸಹಕಾರ ನೀಡುತ್ತೇನೆ ಎಂದರು.

ಮನುವಿಕಾಸ ಸಂಸ್ಥೆಯು ಇ-ಶಕ್ತಿ ಯೋಜನೆಯು ಪರಿಶೋಧಕರಾಗಿ ಕೆಲಸ ನಿರ್ವಹಿಸಿದ ನಿವೃತ್ತ ಬ್ಯಾಂಕ್ ಅಧಿಕಾರಿ ಶ್ರೀ ಎಲ್. ವಿ. ನಾಯಕ್ ಅವರಿಗೆ ಈ ಸಂಧರ್ಭದಲ್ಲಿ ಸನ್ಮಾನ ಮಾಡಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಎಲ್. ವಿ. ನಾಯಕ್ ಮಾತನಾಡಿ ಸಹಾಯ ಸಂಘಗಳು ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ದೊಡ್ಡ ಪಾಲುದಾರಿಕೆ ಹೊಂದಿವೆ. ಸ್ವ-ಸಹಾಯ ಸಂಘಗಳು ಲೆಕ್ಕ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಿದ್ದಲ್ಲಿ ಸಂಘದ ಯಶಸ್ಸು ಸಾಧ್ಯ. ಸಂಘದಲ್ಲಿ ನಿರಂತರ ಉಳಿತಾಯ ಹೆಚ್ಚಿಸುತ್ತಾ ಹೋದರೆ ಬ್ಯಾಂಕಿನ ಸಾಲದ ಅವಶ್ಯಕತೆ ಇರುವುದಿಲ್ಲ. ಮೊದಲು ಮನುವಿಕಾಸ ಸಂಸ್ಥೆಯ ಬಗ್ಗೆ ಅಷ್ಟೊಂದು ಮಾಹಿತಿ ಇರಲಿಲ್ಲ. ಸಂಸ್ಥೆಗೆ ಬಂದನಂತರ ಸಂಸ್ಥೆ ಅನೇಕ ಸಾಮಾಜಿಕ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುತ್ತಿರುವುದು ತಿಳಿದು ಬಂದಿತು. ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರು ತಮ್ಮ **21**ನೇ ವಯಸ್ಸಿಗೆ ಸಂಸ್ಥೆಯನ್ನು ಕಟ್ಟಿದ್ದಾರೆ. ಅವರು ಸಣ್ಣ ವಯಸ್ಸಿನಲ್ಲಿಯೇ ಇಷ್ಟೊಂದು ದೂರದೃಷ್ಠಿ ಮತ್ತು ಸಾಮಾಜಿಕ ಕಳಕಳಿ ಹೊಂದಿರುವುದು ನಿಜಕ್ಕೂ ಶ್ಲಾಘನೀಯ ಎಂದರು.











ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತಾಲೂಕಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಚಂದ್ರು ಎಸಳೆ ಮನುವಿಕಾಸ ಸಂಸ್ಥೆ ಜಲ ಸಂರಕ್ಷಣೆಯೊಂದಿಗೆ ಮಹಿಳಾ ಸಬಲೀಕರಣದಲ್ಲಿ ತೊಡಗಿರುವುದು ಶ್ಲಾಘನೀಯ. ಮಹಿಳಾ ಸಂಘಗಳ ಸದಸ್ಯರು ಆರ್ಥಿಕ ಚಟುವಟಿಕೆಯೊಂದಿಗೆ ಜಲಸಂರಕ್ಷಣೆಯಲ್ಲೂ ತೊಡಗಿಕೊಳ್ಳಬೇಕು. ಒಂದು ಹೆಜ್ಜೆ ಜಲಜಾಗೃತಿ ಕಡೆಗೆ ಯೋಜನೆ ಕುರಿತು ಮಾಹಿತಿ ನೀಡಿ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಮನೆಯಂಗಳಲ್ಲಿ ಛಾವಣಿ ನೀರು ಸಂಗ್ರಹಿಸಲು ಧನಸಹಾಯ ನೀಡಲಾಗುತ್ತಿದೆ. ಮನುವಿಕಾಸ ಸಂಸ್ಥೆ ಬನವಾಸಿ ಭಾಗದಲ್ಲಿ ದೊಡ್ಡ ಕೆರೆಗಳನ್ನು ನಿರ್ಮಿಸಿದೆ ಜೊತೆಗೆ ಸಿರಸಿ ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕುಗಳಲ್ಲಿ ರೈತರ ಸಹಭಾಗಿತ್ವದಲ್ಲಿ ಸಣ್ಣ ಕೆರೆ ನಿರ್ಮಿಸಿರುವುದನ್ನೂ ಕೇಳಿದ್ದೇನೆ. ಮನುವಿಕಾಸದ ಯೋಜನೆಗಳನ್ನು ಸರ್ಕಾರ ತಮ್ಮ ಕಾರ್ಯಕ್ರಮಗಳನ್ನಾಗಿ ಅಳವಡಿಸಿಕೊಳ್ಳಬೇಕು ಎಂದರು.

'ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಜಯಾ ಬ್ಯಾಂಕ್ ಟಿ.ಎಸ್.ಎಸ್. ಶಾಖೆಯ ವ್ಯವಸ್ಥಾಪಕರಾದ ಶ್ರೀಮತಿ ನಾಗವೇಣಿ ನಾಯ್ಕ ಮಾತನಾಡಿ ಮನುವಿಕಾಸ ಸಂಸ್ಥೆಯ ಸಮಾಜೋಪಯೋಗಿ ಯೋಜನೆಗಳನ್ನು ಮೊದಲಿನಿಂದಲೂ ಗಮನಿಸಿದ್ದೇನೆ. ಸ್ತ್ರೀಯರ ಸಬಲೀಕರಣ ಹಾಗೂ ಅವರನ್ನು ಸ್ವ-ಉದ್ಯೋಗ ಮಾಡುವಂತೆ ಪ್ರೇರೇಪಿಸುತ್ತಿರುವ ಸಂಸ್ಥೆಯ ಕಾರ್ಯವು ಶ್ಲಾಘನೀಯ. ಇದಷ್ಟೇ ಅಲ್ಲದೆ ನೀರಿನ ಸಂರಕ್ಷಣೆ ಹಾಗೂ ಇತರ ಸಾಮಾಜಿಕ ಕಾರ್ಯಕ್ರಮಗಳನ್ನು ಸಂಸ್ಥೆ ಮಾಡುತ್ತಿದೆ. ಕಾನಸೂರಿನಲ್ಲಿ ಹಲವಾರು ಮನುವಿಕಾಸ ಸಂಘಗಳಿಗೆ ನನ್ನ ಅವಧಿಯಲ್ಲಿ ಸಾಲ ನೀಡಿದ್ದು ಅವರು ಆರ್ಥಿಕವಾಗಿ ಮುಂದೆ ಬಂದಿದ್ದನ್ನು ಗಮನಿಸಿದ್ದೇನೆ. ಹೀಗೆಯೇ ಈಗಲೂ ಕೂಡ ಸಿರಸಿಯ ಉತ್ತಮ ಸಂಘಗಳು ತಮ್ಮ ಬ್ಯಾಂಕ್‌ಗೆ ಬಂದರೆ ಸಾಲ-ಸೌಲಭ್ಯ ಒದಗಿಸುತ್ತೇನೆ ಎಂದರು. ಬ್ಯಾಂಕ್‌ಗಳಿಂದ ಸ್ವಸಹಾಯ ಸಂಘಗಳಿಗೆ ದೊರೆಯಬಹುದಾದ ವಿವಿಧ ಸಾಲಗಳ ಮತ್ತು ವಿಮಾ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯು 2003 ರಿಂದ ಜಲ ಸಂರಕ್ಷಣೆ, ಮಹಿಳಾ ಸಬಲೀಕರಣ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸುಮಾರು 2500 ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದೆ. ಸುಮಾರು 1500 ಕ್ಕೂ ಹೆಚ್ಚು ಮಕ್ಕಳಿಗೆ ದಿನಬಳಕೆಯ ವಸ್ತುಗಳನ್ನು ಹಂಚಿ ಅವರ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗಿದೆ. ಸುಮಾರು 3000 ಸ್ವ-ಸಹಾಯ ಸಂಘಗಳನ್ನು ಈಗಾಗಲೇ ರಚಿಸಿದ್ದು 25000 ಮಹಿಳೆಯರಿಗೆ ಸ್ವ-ಸಹಾಯ ಸಂಘದ ತತ್ವದ ಕುರಿತು ತರಬೇತಿ ನೀಡಲಾಗುತ್ತಿದೆ. ಸುಮಾರು 5000 ಮಹಿಳೆಯರನ್ನು ಉತ್ಪಾದಕ ಕಂಪನಿ ಪರಿಕಲ್ಪನೆಯಲ್ಲಿ ಒಗ್ಗೂಡಿಸಿ ಕೌಶಲ್ಯ ತರಬೇತಿ ನೀಡುವ ಯೋಜನೆ ಇದೆ ಎಂದರು.

ಸ್ವ-ಸಹಾಯ ಸಂಘದ 50 ಕ್ಕೂ ಹೆಚ್ಚು ಮಹಿಳೆಯರಿಗೆ ಬೆಳಗ್ಗಿನ ಅವಧಿಯಲ್ಲಿ ಮನುವಿಕಾಸ ನಿರ್ದೇಶಕರಾದ ಶ್ರೀ ಗಣಪತಿ ಭಟ್ ಹಾಗೂ ಮಧ್ಯಾಹ್ನ ದೇಶಪಾಂಡೆ ರುಡ್‌ಸೆಟ್ ಸಂಸ್ಥೆಯ ಮಹಾಬಲೇಶ್ವರ ನಾಯ್ಕ ತರಬೇತಿ ನೀಡಿದರು. ತರಬೇತಿಯಲ್ಲಿ ಸ್ವ-ಸಹಾಯ ಸಂಘದ ಪರಿಕಲ್ಪನೆ, ಲೆಕ್ಕ ಪತ್ರ ನಿರ್ವಹಣೆ, ನಾಯಕತ್ವ, ಒಕ್ಕೂಟ, ಸಂಘದ ಬ್ಯಾಂಕ್ ಸಂಪರ್ಕ, ಸಂಘದ ಮೌಲ್ಯಮಾಪನ ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಯಿತು.

ಗಣೇಶ ನೇತ್ರಾಲಯದ ಮುಖ್ಯಸ್ಥರಾದ ಡಾ॥ ಶಿವರಾಮ್ ಹಾಗೂ ಡಾ. ತನುಶ್ರೀ ಹೆಗಡೆ ನೇತ್ರದಾನದ ಮಹತ್ವ, ನೇತ್ರದಾನ ಮಾಡುವುದು ಹೇಗೆ ಎಂಬಿತ್ಯಾದಿ ವಿಚಾರಗಳನ್ನು ತಿಳಿಸಿದರು.

ಮುಂಡಗೋಡ ತಾಲೂಕಿನ ಗಣೇಶಪುರದಲ್ಲಿ 27.06.2018 ರಂದು ನಡೆದ ತರಬೇತಿಯನ್ನು ಜಿಲ್ಲಾ ಪಂಚಾಯತ ಸದಸ್ಯರಾದ ಶ್ರೀ ಎಲ್. ಟಿ. ಪಾಟೀಲ ಉದ್ಘಾಟಿಸಿದರು. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಮುಂಡಗೋಡ ಶಾಖೆಯ ವ್ಯವಸ್ಥಾಪಕರಾದ ಶ್ರೀ ರೋಶನ್ ಕುಮಾರ ಉಪಸ್ಥಿತರಿದ್ದರು.




ಮುಂಡಗೋಡ ತಾಲೂಕಾ ಗಣೇಶಪುರದಲ್ಲಿ ಉದ್ಘಾಟಿಸಿ ಮಾತನಾಡುತ್ತಿರುವ ಜಿ.ಪಂ. ಸದಸ್ಯರಾದ ಶ್ರೀ ಎಲ್. ಟಿ. ಪಾಟೀಲ



ತರಬೇತಿಯಲ್ಲಿ ಪಾಲ್ಗೊಂಡ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳು

ಹೊನ್ನಾವರದಲ್ಲಿ 28.06.2018 ರಂದು ನಡೆದ ತರಬೇತಿಯನ್ನು ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀಮತಿ ಸವಿತಾ ಗೌಡ ಉದ್ಘಾಟಿಸಿದರು. ಸಾಮಾಜಿಕ ಕಾರ್ಯಕರ್ತರಾದ ಶ್ರೀ ಕೃಷ್ಣಾ ಗೌಡ ಉಪಸ್ಥಿತರಿದ್ದರು. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಹೊಳ್ಳ ಬ್ಯಾಂಕಿನ ಸೌಲಭ್ಯಗಳನ್ನು ವಿವರಿಸಿದರು. ಕೇಂದ್ರ ಸರ್ಕಾರದ ವಿವಿಧ ವಿಮಾ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು

ಮುಂಡಗೋಡದಲ್ಲಿ 29.06.2018 ರಂದು ನಡೆದ ತರಬೇತಿಯನ್ನು ಕೆನರಾ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಗುರುನಾಥ ಜೋಶಿ ಉದ್ಘಾಟಿಸಿ ತಮ್ಮ ಬ್ಯಾಂಕ್ ಸ್ವ-ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ನೀಡಲು ಸಿದ್ಧವಿದೆ ಎಂದರು. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶ್ರೀ ಮಂಜುನಾಥ ಸಾಳುಂಕೆ ಸರ್ಕಾರದಿಂದ ಮಹಿಳೆಯರಿಗೆ ಸಿಗುವ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಿದರು.



ಹೊನ್ನಾವರದಲ್ಲಿ ನಡೆದ ತರಬೇತಿಯನ್ನು ಉದ್ಘಾಟಿಸುತ್ತಿರುವ ಜಿ.ಪಂ. ಸದಸ್ಯೆ ಶ್ರೀಮತಿ ಸವಿತಾ ಗೌಡ





# ಮನುವಿಕಾಸ ಸಂಸ್ಥೆಗೆ ಎಮ್. ಐ. ಟಿ ವಿದ್ಯಾರ್ಥಿಗಳ ಅಧ್ಯಯನ ಪ್ರವಾಸ

ಸ್ಥಳೀಯ ಮನುವಿಕಾಸ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯು ನೀರು ಸಂರಕ್ಷಣೆ, ಒಕ್ಕಲುತನ ಹುಟ್ಟುವಳಿದಾರರ ಕಂಪನಿಯ ಮೂಲಕ ಅಡಿಕೆ ಸಂಸ್ಕರಣೆ ಮತ್ತು ತೋಟ ನಿರ್ವಹಣೆ ವಿಷಯವಾಗಿ ಕೆಲಸ ನಿರ್ವಹಿಸುತ್ತಿರುವುದನ್ನು ಗಮನಿಸಿ ಅದನ್ನು ಅಧ್ಯಯನ ಮಾಡಲು ಅಮೆರಿಕದ ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯ ಮ್ಯಾಸಾಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಧಾರವಾಡದ ಐ. ಐ. ಟಿ ವಿದ್ಯಾರ್ಥಿಗಳು ಇತ್ತೀಚೆಗೆ ಮನುವಿಕಾಸ ಸಂಸ್ಥೆಗೆ ಭೇಟಿ ನೀಡಿದ್ದರು. ಬಾಳೆಗದ್ದೆಯಲ್ಲಿರುವ ಅಡಿಕೆ ಸಂಸ್ಕರಣೆ ಘಟಕಕ್ಕೆ ತೆರಳಿ ಅಲ್ಲಿ ಅಳವಡಿಸಬಹುದಾದ ತಾಂತ್ರಿಕತೆ ಕುರಿತು ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ಟ ಮತ್ತು ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿಯ ನಿರ್ದೇಶಕ ಶ್ರೀ ವಿವೇಕ ಹೆಗಡೆಯವರೊಂದಿಗೆ ಚರ್ಚಿಸಿದರು. ನಂತರ ಮನುವಿಕಾಸ ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾದ ವಿವಿಧ ನೀರಿಂಗಿಸುವ ಮಾದರಿಗಳ ಅಧ್ಯಯನ ನಡೆಸಿದರು. ಸಣ್ಣ ರೈತರಿಗೆ ಅಗತ್ಯವಿರುವ ಅಡಿಕೆ ಕೊಯ್ಲು ಯಂತ್ರ, ಅಡಿಕೆ ಸುಲಿಯುವ ಯಂತ್ರ, ತೋಟಕ್ಕೆ ಬೇಕಾಗುವ ವಿವಿಧ ಯಂತ್ರಗಳು, ಭತ್ತದ ಗದ್ದೆಗೆ ಅಗತ್ಯವಿರುವ ಯಂತ್ರಗಳ ಅವಿಷ್ಕಾರದ ವಿಷಯವಾಗಿಯೂ ಚರ್ಚಿಸಲಾಯಿತು.

ಅಧ್ಯಯನ ಪ್ರವಾಸವನ್ನು ದೇಶಪಾಂಡೆ ಪ್ರತಿಷ್ಠಾನದ ಶ್ರೀ ಸಂಜೀವ ಕುಲಕರ್ಣಿ ಮತ್ತು ಎಮ್. ಐ. ಟಿ ಟಾಟಾ ಸೆಂಟರಿನ ಶ್ರೀ ಸಂತೋಷ ಶಾನಭೋಗಿ ಆಯೋಜಿಸಿದ್ದರು. ಸಾಮಾನ್ಯ ಜನರಿಗೆ ಅಗತ್ಯವಿರುವ ತಂತ್ರಜ್ಞಾನವನ್ನು ಗಮನಿಸಿ ಅದನ್ನು ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿಪಡಿಸಿ ಜನರ ಜೀವನ ಮಟ್ಟವನ್ನು ಸುಧಾರಿಸುವುದು ಈ ಅಧ್ಯಯನ ಪ್ರವಾಸದ ಆಶಯವಾಗಿದೆ.

ಮ್ಯಾಸಾಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅಮೆರಿಕದ ಪ್ರಾಧ್ಯಾಪಕರಾದ ಡಾ. ರಾಬರ್ಟ ಉಪಸ್ಥಿತರಿದ್ದರು.





# ಮನುವಿಕಾಸ ಸಂಸ್ಥೆಯಿಂದ ಜಿಲ್ಲೆಯಾದ್ಯಂತ ಒಕ್ಕೂಟದ ಸಭೆಗಳು







ಮನುವಿಕಾಸ ಸಂಸ್ಥೆಯಿಂದ ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ಸ್ವ ಸಹಾಯ ಗುಂಪುಗಳ ಒಕ್ಕೂಟದ ಸಭೆಗಳನ್ನು ನಡೆಸಲಾಗುತ್ತಿದೆ. ಈ ಸಭೆ ಪ್ರತಿ ತಿಂಗಳೂ ನಡೆಸಲಾಗುತ್ತಿದ್ದು ಸಂಘದ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಅದೇ ರೀತಿ ಸಂಘದ ಸದಸ್ಯರ ಸಾಮಾನ್ಯ ಸಮಸ್ಯೆಗಳ ಕುರಿತೂ ಚರ್ಚಿಸಲಾಗುತ್ತದೆ. ಸಂಘದ ಸದಸ್ಯರ ಆದಾಯ ಹೆಚ್ಚಿಸುವ ಮಾರ್ಗೋಪಾಯಗಳ ಕುರಿತು ಚರ್ಚಿಸಲಾಗುತ್ತದೆ. ಮೇ ತಿಂಗಳಿನಲ್ಲಿ ಕುಮಟಾ, ಹೊನ್ನಾವರ, ಗಂಗೆಕೊಳ್ಳ, ಕಾನ್ಸೂರ, ಮಳಗಿ, ಪಾಳ, ಗುಡ್ನಾಪುರ, ದಾಂಡೇಲಿ, ರಾಮನಗರ, ಸಿರಸಿ, ಸಿದ್ದಾಪುರ, ಕಿರವತ್ತಿ, ಮುಂಡಗೋಡ ಮತ್ತು ಸುತ್ತಮುತ್ತಲಿನ ಅನೇಕ ಕಡೆಗಳಲ್ಲಿ ಸಭೆ ನಡೆಸಲಾಯಿತು. ಮನುವಿಕಾಸ ಸಂಸ್ಥೆಯ ಮುಂದಿನ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಲಾಯಿತು.

ಮನುವಿಕಾಸ ಸಂಸ್ಥೆ ನಡೆಸುವ ಸ್ವ ಸಹಾಯ ಸಂಘಗಳ ಸಭೆಗಳಲ್ಲಿ ಮಹಿಳೆಯರು ಅನೇಕ ಜ್ವಲಂತ ಸಮಸ್ಯೆಗಳನ್ನು ಮುಂದಿಡುತ್ತಿದ್ದಾರೆ. ಅನೇಕ ಸದಸ್ಯರ ಹತ್ತಿರ ರೇಷನ್ ಕಾರ್ಡ ಇದೆ ಆದರೆ ಮನೆ ನಂಬರ್ ಇಲ್ಲ. ಜಮೀನು ರಹಿತರಿಗೆ ಯಾವುದೇ ಯೋಜನೆಯಲ್ಲಿ ಸರಕಾರದಿಂದ ಮನೆ ಮಂಜೂರಾತಿ ಮಾಡುವುದಿಲ್ಲ. ಹಾಗಾದರೆ ಜಮೀನು ರಹಿತರು ಎಲ್ಲಿ ವಾಸಿಸಬೇಕು? ಹೆಚ್ಚಿನ ಮನೆಗಳು ಹತ್ತು ಇಪ್ಪತ್ತು ವರ್ಷದ, ಬೀಳುವ ಸ್ಥಿತಿಯಲ್ಲಿರುವ ಮನೆಗಳು. ಅದನ್ನು ರಿಪೇರಿ ಮಾಡಲು ಮತ್ತು ಪುನಃ ನಿರ್ಮಿಸಲು ಅರಣ್ಯ ಇಲಾಖೆಯವರು ಬಿಡುವುದಿಲ್ಲ. ನಮ್ಮ ಪರಿಸ್ಥಿತಿ ಹೇಳತೀರದು ಎಂದು ಅಳಲು ತೋಡಿಕೊಳ್ಳುತ್ತಿದ್ದಾರೆ. ಮನೆ ಮಂಜೂರಾತಿ ನೀಡದ, ಮನೆ ರಿಪೇರಿಗೂ ಧನ ಸಹಾಯ ನೀಡದ ಸರ್ಕಾರ ಶೌಚಾಲಯ ನಿರ್ಮಿಸಲು ಧನ ಸಹಾಯ ನೀಡುತ್ತದೆ. ಎಂತಹ ವಿಪರ್ಯಾಸ..! ಇನ್ನು ಚುನಾವಣಾ ಪೂರ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸ್ವ ಸಹಾಯ ಗುಂಪುಗಳ ಸಾಲ ಮರುಪಾವತಿ ಮಾಡುತ್ತೇವೆ ಎಂದು ಆಶ್ವಾಸನೆ ನೀಡಿ ನಂತರ ಮರೆತು ಬಿಡುತ್ತಾರೆ. ಬ್ಯಾಂಕ್ ಸಾಲ ಪಡೆದು ಮರುಪಾವತಿ ಸರಿ ಇರುವ ಸಂಘಗಳಿಗೆ ಕನಿಷ್ಟ ಒಂದು ಲಕ್ಷವಾದರೂ ಸಾಲ ಮನ್ನಾ ಆಗಲಿ ಎಂಬುದು ಅವರ ಬೇಡಿಕೆ. ಒಂದೊಂದು ಹಳ್ಳಿಗಳಲ್ಲಿ ಕನಿಷ್ಟ ಐದಾರು ಸಂಘಗಳಿರುತ್ತವೆ. ಆದರೆ ಅವರಿಗೆ ಒಂದೆಡೆ ಕುಳಿತು ಸಭೆ ನಡೆಸಲು ನಿರ್ದಿಷ್ಟ ಜಾಗವಿರುವುದಿಲ್ಲ. ಇನ್ನು ಬ್ಯಾಂಕುಗಳಲ್ಲಿ ಉತ್ತಮ ಮ್ಯಾನೇಜರ್ ಇದ್ದರಷ್ಟೇ ಸಂಘಳಿಗೆ ಸಹಕಾರ ಸಿಗುತ್ತದೆ. ಹೆಚ್ಚಿನ ಮ್ಯಾನೇಜರ್‌ಗಳಿಗೆ ಭಾಷೆ ಸಮಸ್ಯೆ. ಇನ್ನು ಕೆಲವರಿಗೆ ಸಂಘದ ಪರಿಕಲ್ಪನೆಯೇ ಇಲ್ಲ. ಸ್ವಯಂ ಸೇವಾ ಸಂಸ್ಥೆಗಳು ಅನೇಕ ವರ್ಷಗಳಿಂದ ಸ್ವ ಸಹಾಯ ಸಂಘಗಳ ಸಂಘಟನೆ ಮಾಡುತ್ತಿವೆ. ಆದರೆ ಅಂತಹ ಸಂಘಗಳಿಗೆ ಸರ್ಕಾರದಿಂದ ಯಾವುದೇ ಮಾನ್ಯತೆ ದೊರೆಯುತ್ತಿಲ್ಲ. ತಾರತಮ್ಯ ಯಾಕೆ ಎಂದು ಸದಸ್ಯರಿಗೆ ಅರ್ಥವಾಗುತ್ತಿಲ್ಲ. ಸಾರಾಯಿ ಮಾರಾಟದ ಸಮಸ್ಯೆಗೆ ಪರಿಹಾರವೇ ದೊರೆತಿಲ್ಲ. ಯಾವ ಸರ್ಕಾರವೂ ಮದ್ಯಪಾನ ನಿಷೇಧದ ಕುರಿತು ಕ್ರಮ ಕೈಗೊಳ್ಳುತಿಲ್ಲ. ಮಹಿಳಾ ಸಂಘಗಳಿಗೆ ಆದಾಯ ಚಟುವಟಿಕೆಗಳನ್ನು ನಡೆಸಲು ತರಬೇತಿ ಕೊರತೆ ಇದೆ. ಮಾರುಕಟ್ಟೆ ಪ್ರೋತ್ಸಾಹ ಇಲ್ಲವೇ ಇಲ್ಲ. ವಿದ್ಯಾವಂತ ನಿರುದ್ಯೋಗಿ ಯುವಕರ ವಲಸೆ ಮತ್ತು ಮನೆಯಲ್ಲಿರುವ ವಯಸ್ಸಾದ ತಂದೆ ತಾಯಿಗಳ ರೋಧನೆ ಯಾರಿಗೂ ಕೇಳಿಸುತ್ತಿಲ್ಲ ಎಂದು ಸದಸ್ಯರು ತಮ್ಮ ಕಷ್ಟವನ್ನು ತೋಡಿಕೊಂಡರು. ಸ್ನೇಹಿತರೇ ಬಡ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗೋಪಾಯಗಳು ತಮಗೆ ತಿಳಿದಲ್ಲಿ ದಯವಿಟ್ಟು ಶೇರ್ ಮಾಡಿ.








# ಮನುವಿಕಾಸ ಸಂಸ್ಥೆಯಿಂದ ರೈತರ ಪ್ರಗತಿಗಾಗಿ ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿ ಪ್ರಾರಂಭ

ಉತ್ತರ ಕನ್ನಡದ ಬಹುತೇಕ ರೈತರು ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರಾಗಿದ್ದು ಇತ್ತೀಚಿಗೆ ಹೆಚ್ಚಿನ ರೈತರು ಕೃಷಿಯಿಂದ ವಿಮುಖರಾಗಿ ನಗರದ ಕಡೆ ಜೀವನವನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇತ್ತೀಚಿಗೆ ಯುವಕರಂತೂ ಹಳ್ಳಿಯನ್ನು ಬಿಟ್ಟು ನಗರದಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿ ಕೃಷಿಯನ್ನು ದೂರಮಾಡಿ ಕೃಷಿ ಭೂಮಿಯನ್ನು ಅಲಕ್ಷ ಮಾಡುತ್ತಿದ್ದಾರೆ. ಕೆರೆ ಅಭಿವೃದ್ಧಿ ಕೆಲಸ



ನಿರ್ವಹಿಸುವಾಗ ಮನುವಿಕಾಸ ಸಂಸ್ಥೆ ರೈತರ ಸಮಸ್ಯೆಗಳನ್ನು ಗಮನಿಸಿ ರೈತರ ಸಮಸ್ಯೆಗೆ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಮತ್ತು ಆಸಕ್ತಿ ಕಳೆದುಕೊಳ್ಳುತ್ತಿರುವ ಯುವ ಕೃಷಿಕರಲ್ಲಿ ಕೃಷಿ ತ್ರಾಸದಾಯಕವಲ್ಲ ಎನ್ನುವುದನ್ನು ಸಾಬೀತುಪಡಿಸಲು ಪ್ರಯತ್ನಿಸಿ ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿ ಪ್ರಾರಂಭಿಸಿದೆ. ಸಣ್ಣ ಹಿಡುವಳಿದಾರರು ಕೆಲಸಗಾರರ ಸಮಸ್ಯೆಯೊಂದಿಗೆ ಯಂತ್ರೋಪಕರಣಗಳ ಅಳವಡಿಕೆಯಲ್ಲೂ ಸೋತಿದ್ದಾರೆ. ಸಣ್ಣ ಹಿಡುವಳಿದಾರರು ಯಂತ್ರೋಪಕರಣಕ್ಕೆ ಅಧಿಕ ಬಾಡಿಗೆ ಕೊಡುವುದರೊಂದಿಗೆ ಗೊಬ್ಬರ ಮತ್ತಿತರ ಕೆಲಸಕ್ಕೂ ಹೆಚ್ಚು ಹಣ ತೆರಬೇಕಾಗಿದೆ. ಸಣ್ಣ ರೈತರು ಖರೀದಿ ಮತ್ತು ಮಾರಾಟ ಪ್ರಕ್ರಿಯೆಯಲ್ಲಿ ಚಿಲ್ಲರೆ ವ್ಯಾಪಾರಿಗಳ ಮೇಲೆ ಅವಲಂಬಿತರಾಗಿರುವುದರಿಂದ ಸಣ್ಣ ರೈತರ ದುಡಿಮೆ ಮಧ್ಯವರ್ತಿಗಳ ಪಾಲಾಗುವುದೇ ಹೆಚ್ಚು.



ದೊಡ್ಡ ರೈತರು ತಮಗೆ ಬೇಕಾದ ಯಂತ್ರಗಳನ್ನು ತಾವೇ ಇಟ್ಟುಕೊಂಡು ಜಮೀನಿನಲ್ಲಿ ಕೆಲಸ ನಿರ್ವಹಿಸಲು ನಿರ್ದಿಷ್ಟಪಡಿಸಿದ ಪಂಗಡದ ಆಳುಗಳನ್ನು ನೇಮಿಸಿಕೊಂಡು ಕೃಷಿಯನ್ನು ಸುಲಭವಾಗಿಸಿಕೊಂಡಿದ್ದಾರೆ. ಆದರೆ ಸಣ್ಣ ರೈತರಿಗೆ ವರ್ಷಪೂರ್ತಿ ಕೆಲಸ ಕೊಡುವ ಸಾಮರ್ಥ್ಯ ಇಲ್ಲದಿರುವುದುರಿಂದ ಆಳುಗಳನ್ನು ಅಗತ್ಯಬಿದ್ದಾಗ ಹೊಂದಿಸುವುದು



ಬಹಳ ಕಷ್ಟಕರವಾಗಿದೆ. ಕೊಯ್ಲು ಮತ್ತು ಕೊಯ್ಲೋತ್ತರ ಸಂಸ್ಕರಣೆ ಮಾಡಲಾಗದೇ ಅನೇಕ ಅಡಿಕೆ ಬೆಳೆಗಾರರು ಬೆಳೆದುನಿಂತ ಫಸಲನ್ನು ಗುತ್ತಿಗೆದಾರರು ಕೇಳಿದಷ್ಟು ಹಣಕ್ಕೆ ಮಾರಿಬಿಡುವ ಅವಸ್ಥೆ ಬಂದಿದೆ. ಕದಂಬ ಮಾರ್ಕೆಟಿಂಗ್ ಕಳೆದ ಕೆಲವು ವರ್ಷಗಳಿಂದ ಹಸಿ ಅಡಿಕೆ ಟೆಂಡರ್ ಮಾಡುವ ವ್ಯವಸ್ಥೆ ಕಲ್ಪಿಸಿದ್ದು ರೈತರಿಗೆ ಮೊದಲಿಗಿಂತ ಅನುಕೂಲವಾಗಿದೆ. ಆದರೆ ಕೊಯ್ಲೋತ್ತರ ಸಂಸ್ಕರಣೆ ಮಾಡಿ ಕೊಡುವ ವ್ಯವಸ್ಥೆ ಯಾವುದೇ ಸಂಘ ಸಂಸ್ಥೆಗಳು ಮಾಡುತ್ತಿರಲಿಲ್ಲ.

ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿ ಹಸಿ ಅಡಿಕೆ ತಂದು



ಅದನ್ನು ಸಂಪೂರ್ಣ ಸಂಸ್ಕರಣೆ ಮಾಡಿ ಅವಶ್ಯವಿದ್ದಲ್ಲಿ ಗ್ರೇಡಿಂಗ್ ಮಾಡಿಕೊಡುವ ವ್ಯವಸ್ಥೆಯನ್ನೂ ರೈತರಿಗೆ ಕಳೆದ ಎರಡು ವರ್ಷಗಳಿಂದ ಕಲ್ಪಿಸುತ್ತಿದೆ. ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿ ಮನುವಿಕಾಸ ಸಂಸ್ಥೆಯ ಮಾರ್ಗದರ್ಶನದಲ್ಲಿ ನಬಾರ್ಡ ಮತ್ತು ದೇಶಪಾಂಡೆ ಪ್ರತಿಷ್ಠಾನ ಹುಬ್ಬಳ್ಳಿ ಇವರ ಆರ್ಥಿಕ ನೆರವಿನಲ್ಲಿ ಪ್ರಾರಂಭವಾಗಿದೆ. ಶ್ರೀ ಹರಿಶ್ಚಂದ್ರ ಭಟ್ಟ ಮತ್ತು ಶ್ರೀ ವಿವೇಕ ಹೆಗಡೆ ನಿರ್ದೇಶಕರಾಗಿ ಕಂಪನಿಯನ್ನು ಮುನ್ನಡೆಸುತ್ತಿದ್ದಾರೆ.

ಸಣ್ಣ ರೈತರು ಕಂಪನಿ ತತ್ವದಡಿಯಲ್ಲಿ ಒಂದಾಗಿ ಒಟ್ಟಾಗಿ ಬೇಸಾಯ ಮಾಡಿದಾಗ, ಅವಶ್ಯಕ ವಸ್ತುಗಳನ್ನು ಸಗಟು ವ್ಯಾಪಾರಿಗಳಲ್ಲಿ ಖರೀದಿಸಿ ಹಂಚಿಕೊಂಡಾಗ ಮತ್ತು ಕಂಪನಿ ಮೂಲಕ ಯಂತ್ರಗಳನ್ನು ಖರೀದಿಸಿ ಸದಸ್ಯ ರೈತರಿಗೆ ಬಾಡಿಗೆ ನೀಡಿದಾಗ ಕಂಪನಿ ಲಾಭ ಗಳಿಸಲು ಸಾಧ್ಯ ಮತ್ತು ತನ್ಮೂಲಕ ರೈತರಿಗೆ ಅನುಕೂಲ ಕಲ್ಪಿಸಲು ಸಾಧ್ಯ ಎನ್ನುವುದು ರೈತ ಉತ್ಪಾದಕ ಕಂಪನಿಗಳ ಉದ್ದೇಶವಾಗಿದೆ. ಕಂಪನಿ ಮೂಲಕ ರೈತರು ತಮ್ಮ ಬೆಳೆಯನ್ನು ಸಂಸ್ಕರಿಸಿ ತಕ್ಕುದಾದ ಮೌಲ್ಯವೃದ್ಧಿ ಮಾಡಿ ನೇರ ಮಾರುಕಟ್ಟೆ ಮಾಡುವುದರಿಂದಲೂ ಹೆಚ್ಚಿನ ಲಾಭ ಗಳಿಸಬಹುದಾಗಿದೆ.

ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿಗೆ ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಯಾದ S3IDF ತಂತ್ರಜ್ಞಾನ ಮತ್ತು ಬಂಡವಾಳದ

ನೆರವನ್ನು ನೀಡುತ್ತಿದೆ. ವಿಜಯಾ ಬ್ಯಾಂಕ್ ಓವರ್ ಡ್ರಾಫ್ಟ್ ಸೌಲಭ್ಯ ವಿಸ್ತರಿಸಿ ವ್ಯಾಪಾರ ವಹಿವಾಟನ್ನು ಉತ್ತೇಜಿಸುತ್ತಿದೆ. ಕಂಪನಿ ಭತ್ತ ಖರೀದಿ, ಭತ್ತದಲ್ಲಿ ಹೆಚ್ಚಿನ ಬೆಳೆ ಬೆಳೆಯುವ ಮಾದರಿಗಳ ಅಧ್ಯಯನ ಮತ್ತು ಅಳವಡಿಕೆ, ರೈತರ ಕ್ಷೇತ್ರ ದರ್ಶನ ಮತ್ತು ತರಬೇತಿ ಏರ್ಪಡಿಸುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಿದೆ.

ಕಂಪನಿ ರೈತರಿಗೆ ಕೊಯ್ಲೋತ್ತರ ಸಂಸ್ಕರಣೆಗೆ ಸಹಕಾರ ನೀಡುವ ನಿರ್ಧಾರ ತಳೆದಾಗ ಹುಲೇಕಲ್ ರಸ್ತೆಯ ಬಾಳೇಗದ್ದೆಯನ್ನು ಗುರುತಿಸಿತು. ಬಾಳೆಗದ್ದೆಯ ಪ್ರಸಿದ್ಧ ರೈತ ಕುಟುಂಬದ ಸದಸ್ಯರೂ ವೃತ್ತಿಯಲ್ಲಿ ನಿವೃತ್ತ ಬ್ಯಾಂಕ್ ಅಧಿಕಾರಿಗಳೂ ಆದ ಶ್ರೀ ಅನಂತ ಹೆಗಡೆಯವರು ಕಂಪನಿಗೆ ಸಂಸ್ಕರಣಾ ಘಟಕ ತೆರೆಯಲು ಸ್ಥಳಾವಕಾಶ ಮಾಡಿಕೊಟ್ಟರು. ಪ್ರಸ್ತುತ 300 ಕ್ಕೂ ಹೆಚ್ಚು ರೈತರು ಈ ಸಂಸ್ಕರಣಾ ಘಟಕದ ಪ್ರಯೋಜನ ಪಡೆಯುತ್ತಿದ್ದಾರೆ. ಕಂಪನಿ ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ತಾಲೂಕಿನ 600 ಕ್ಕೂ ಹೆಚ್ಚು ರೈತರನ್ನು ಸದಸ್ಯರನ್ನಾಗಿ ಹೊಂದಿದೆ. ಸುಮಾರು 30 ಲಕ್ಷ ವಾರ್ಷಿಕ ವಹಿವಾಟನ್ನು ಹೊಂದಿರುವ ಕಂಪನಿ ಯಲ್ಲಾಪುರ ತಾಲೂಕಿನಲ್ಲಿ ಎರಡನೇ ಸಂಸ್ಕರಣಾ ಘಟಕವನ್ನು ಪ್ರಾರಂಭಿಸಲು ತಯಾರಿ ನಡೆಸಿದೆ.





## ಮನುವಿಕಾಸ ಸಂಸ್ಥೆಗೆ ಆರ್ಥಿಕ ಸಹಕಾರ ನೀಡುತ್ತಿರುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು

Deshpande Foundation
EdelGive Foundation – An Edelweiss Initiative
Anandana – Coca-Cola India Foundation
The GEF Small Grants Programme – UNDP India – gef
GiveIndia – the power to change lives
HDB Financial Services
Earthwatch Institute
NABARD

## ಮನುವಿಕಾಸ ಸಂಸ್ಥೆಯ ಸಂಪರ್ಕವಿಳಾಸ


# MANUVIKASA

**'Mangesh Mahalaxmi' Building**

Rayarpeth, Behind Anjaneya Temple, Vijayanagar,Sirsi Cell: **9845982552**

www.manuvikasa.blogspot.com

http://facebook.com/manuvikasa.karjagi www.manuvikasaindia.org



ಮನುವಿಕಾಸ ಸಂಸ್ಥೆಯ ಚಟುವಟಿಕೆಗಳ ಆಲ್ಬಮ್ ವೀಕ್ಷಿಸುತ್ತಿರುವ ಶಿರಸಿ–ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ



ಕಂತ್ರಾಜಿ ಕೆರೆ ಕಾಮಗಾರಿ ಸಂದರ್ಭದಲ್ಲಿ ರೈತರಿಂದ ಸನ್ಮಾನಗೊಂಡಿರುವ ಮನುವಿಕಾಸ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಹರಿಶ್ಚಂದ್ರ ಭಟ್ಟ ಮತ್ತು ನಿರ್ದೇಶಕ ಶ್ರೀ ಗಣಪತಿ ಭಟ್ಟ



ಕೊಕಾಕೋಲಾ ಇಂಡಿಯಾ ಫೌಂಡೇಶನ್ ಅಧಿಕಾರಿಗಳಿಂದ ಕಾಮಗಾರಿ ಪೂರ್ವ ಪರಿವೀಕ್ಷಣೆ



2017ರ ಕೃಷಿ ಜಯಂತಿಯಲ್ಲಿ ಸ್ವರ್ಣವಲ್ಲೀ ಮಠಾಧೀಶರಾದ ಶ್ರೀ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ದಿವ್ಯ ಹಸ್ತದಿಂದ ಸನ್ಮಾನ ಸ್ವೀಕರಿಸುತ್ತಿರುವ ಸಂದರ್ಭ



ಮನವಿಕಾಸ ಸಂಸ್ಥೆಯಿಂದ ಪುನರುಜ್ಜೀವನಕ್ಕೆ ಆಯ್ಕೆಗೊಂಡ ಕೆರೆಯನ್ನು ವೀಕ್ಷಿಸುತ್ತಿರುವ ಉಪವಿಭಾಗಾಧಿಕಾರಿ ಶ್ರೀ ರಾಜು ಮೊಗವೀರ ಮನುವಿಕಾಸ ಮತ್ತು ರೋಟರಿ ಕ್ಲಬ್ ಸದಸ್ಯರೊಂದಿಗೆ ಚರ್ಚಿಸುತ್ತಿರುವುದು.

ಮನುವಿಕಾಸ ಸಂಸ್ಥೆ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿದ್ದು ಪ್ರತಿ ತಾಲೂಕಿಗೆ ಸಂಬಂಧಿಸಿದ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ

| ತಾಲೂಕ | ಸಿಬ್ಬಂದಿಗಳ ಹೆಸರು | ಸಂಪರ್ಕ ಸಂಖ್ಯೆ |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯಸಂಘಗಳ ನಿರ್ವಹಣೆ) | 9449453774 |
| | ಹರ್ಷ ಕಬ್ಬೂರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8884794648 |
| | ದಿನೇಶ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 8762099331 |
| ಸಿದ್ದಾಪುರ | ಅಶ್ವತ್ಥ್ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9901182957 |
| | ಪುನೀತ್ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686224908 |
| | ಸಂತೋಷ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9535763746 |
| ಯಲ್ಲಾಪುರ | ಬಸಪ್ಪ ಉಗ್ಗಿನಕೇರಿ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9844077521 |
| | ರೇಣುಕಾ ಉಗ್ಗಿನಕೇರಿ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9071905766 |
| | ಸುಬ್ರಾಯ ಭಟ್ಟ (ಸ್ವ–ಸಹಾಯ ಸಂಘಗಳ ನಿರ್ವಹಣೆ ಮತ್ತು ಅಸ್ತ್ರ ಒಲೆ ನಿರ್ಮಾಣ) | 9008974597 |
| | ರಾಘವೇಂದ್ರ ಭಟ್(ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9448424374 |
| ಮುಂಡಗೋಡ | ಬಸವರಾಜ ರಡ್ಡೇರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8095311643 |
| | ಗಣಪತಿ ಯಲಿವಾಳ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9980205013 |
| ಕುಮಟಾ | ಮಂಜುನಾಥ ಪಟಗಾರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8660733463 |
| ಅಂಕೋಲಾ | ರವಿಚಂದ್ರ ವಡ್ಡರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686703539 |
| ಕಾರವಾರ | ವಿಕಾಸ ನಾಯ್ಕ(ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9449458369 |
| ದಾಂಡೇಲಿ | ನಿರಂಜನ್ ಕದಂ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7259689630 |
| ರಾಮನಗರ | ಅಮಿತ್ ಸೋಲಯೇಕರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7026191126 |



ಕೆರೆ ವೀಕ್ಷಣೆಗೆ ಆಗಮಿಸಿ ರೈತರೊಂದಿಗೆ ಚರ್ಚಿಸುತ್ತಿರುವ
ದೇಶಪಾಂಡೆ ಪ್ರತಿಷ್ಠಾನದ ಸಿ.ಇ.ಓ. ಶ್ರೀ ನವೀನ ಝಾ
ಮತ್ತು ಅನುದಾನ ವಿಭಾಗದ ಅಧಿಕಾರಿ
ಶ್ರೀ ಸಂಜೀವ ಕುಲಕರ್ಣಿ

**ಬನವಾಸಿ ಹೋಬಳಿಯ ಮಧುರವಳ್ಳಿ, ಹಾಡಲಗಿ ಗ್ರಾಮದಲ್ಲಿ ಕೆರೆ ಪುನರುಜ್ಜೀವನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಶಾಸಕರ ಸಮ್ಮುಖದಲ್ಲಿ ಸಂಭ್ರಮಿಸುತ್ತಿರುವ ಗ್ರಾಮಸ್ಥರು**











Multi Offset, SIRSI 9449453234